ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಡಿಸೆಂಬರ್ 26, 2024

ಸಂಪುಟ : 51 ಸಂಚಿಕೆ : 223 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ನಗರದಲ್ಲಿ ಸಡಗರದ ಕ್ರಿಸ್‌ಮಸ್


ದಾವಣಗೆರೆ, ಡಿ.25- ಯೇಸು ಕ್ರಿಸ್ತನ ಜನ್ಮದಿನವಾದ ಕ್ರಿಸ್‌ಮಸ್ ಹಬ್ಬವನ್ನು ಕ್ರೈಸ್ತ ಬಾಂಧವರು ಸಡಗರ - ಸಂಭ್ರಮದಿಂದ ಆಚರಿಸಿದರು. ಮನೆಗಳಲ್ಲಿಯೂ ಪುಟ್ಟ ಗೋದಲಿ ನಿರ್ಮಿಸಿ ದೀಪಗಳ ಅಲಂಕಾರ ಮಾಡುವ ಮೂಲಕ ಸಂಭ್ರಮಿಸಿದರು.

ಮನೆಗಳಲ್ಲಿ ಪುಟ್ಟ ಗೋದಲಿ, ದೀಪಗಳ ಅಲಂಕಾರ ಮಾಡಲಾಗಿತ್ತು. ನಕ್ಷತ್ರದ ಆಕೃತಿ ವಿದ್ಯುದ್ದೀಪಗಳು, ಹಬ್ಬಕ್ಕೆ ಶುಭ ಕೋರುವ ಗ್ರೀಟಿಂಗ್‌ಗಳು ಗಮನ ಸೆಳೆದವು. ಬೇಕರಿಗಳಲ್ಲಿ ಕ್ರಿಸ್‌ಮಸ್ ಕೇಕ್‌ಗಳಿಗೆ, ಸಾಂತಾ ಕ್ಲಾಸ್ ಟೋಪಿಗಳಿಗೆ ಬೇಡಿಕೆ ಇತ್ತು.

ಪಿ.ಜೆ. ಬಡಾವಣೆಯ ಸೇಂಟ್ ಥಾಮಸ್ ಚರ್ಚ್ ವಿದ್ಯುತ್ ದೀಪಾಲಂಕಾರದೊಂದಿಗೆ ಝಗಮಗಿಸಿತು. ನಿನ್ನೆ ತಡರಾತ್ರಿ ಯೇಸು ಕ್ರಿಸ್ತನ ಜನನದ ವಿಶೇಷ ಗೋದಲಿ ಪೂಜೆ ನೆರವೇರುವುದರೊಂದಿಗೆ ಹಬ್ಬ ಕಳೆಗಟ್ಟಿತು. ಸೇಂಟ್ ಥಾಮಸ್ ಚರ್ಚ್‌ನ ಫಾದರ್ ಬಾಲಯೇಸುವನ್ನು ಗೋದಲಿಗೆ ಹಾಕಿದರು.

ಚರ್ಚ್‌ನ ಹಿಂಬದಿಯಲ್ಲಿ ನಿರ್ಮಿಸಲಾದ ಗೋದಲಿಯ ವೀಕ್ಷಣೆಗೆ ಜನಜಂಗುಳಿ ಹೆಚ್ಚಿತ್ತು. ಇತರೆ ಸಮಾಜದವರೂ ನೆರೆದಿದ್ದರು. ಜನರು ಮಾತೆ ಮರಿಯಮ್ಮನ ಗವಿ ಬಳಿ ಮೇಣದಬತ್ತಿ ಬೆಳಗಿ ನಿವೇದಿಸಿಕೊಂಡರು. ಚರ್ಚ್ ಸುತ್ತಲಿನ ರಸ್ತೆಗಳಲ್ಲಿ ಕೆಲ ಕಾಲ ಸಂಚಾರ ಅಸ್ತವ್ಯಸ್ತವಾಗಿತ್ತು.

## ಕೆನ್ - ಬೆಟ್ವಾ ನದಿ ಜೋಡಣೆ ಯೋಜನೆಗೆ ಪ್ರಧಾನಿ ಶಿಲಾನ್ಯಾಸ



ಖಜುರಾಹೋ (ಮಧ್ಯಪ್ರದೇಶ), ಡಿ. 25- ಕೆನ್ - ಬೆಟ್ವಾ ನದಿ ಜೋಡಣೆ ಯೋಜನೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಧ್ಯಪ್ರದೇಶದ ಖಜುರಾಹೋದಲ್ಲಿ ಶಿಲಾನ್ಯಾಸ ನೆರವೇರಿಸಿದ್ದಾರೆ.

44,605 ಕೋಟಿ ರೂ. ವೆಚ್ಚದಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ. ಯೋಜನೆಯಿಂದ ಮಧ್ಯ ಪ್ರದೇಶದ 10 ಜಿಲ್ಲೆಗಳ 44 ಲಕ್ಷ ಜನರು ಹಾಗೂ ಉತ್ತರ ಪ್ರದೇಶದ 21 ಲಕ್ಷ (2ನೇ ಪುಟಕ್ಕೆ)







# ಕೃಷಿಯೊಂದಿಗೆ ಹೈನುಗಾರಿಕೆ, ಕುರಿ ಸಾಕಾಣಿಕೆಯಿಂದ ಆರ್ಥಿಕ ಸ್ವಾವಲಂಬನೆ ಸಾಧ್ಯ

ಜಗಳೂರು, ಡಿ. 25- ಗ್ರಾಮೀಣ ಭಾಗದಲ್ಲಿ ರೈತರು ಕೃಷಿ ಚಟುವಟಿಕೆಗೆ ಅವಲಂಬಿತರಾಗದೆ ಪೂರಕವಾಗಿ ಹೈನುಗಾರಿಕೆ, ಕುರಿ ಸಾಕಾಣಿಕೆ ಯೊಂದಿಗೆ ಆರ್ಥಿಕ ಸ್ವಾವಲಂಬಿಗಳಾಗಬೇಕು. ಸರ್ಕಾರದ ಯೋಜನೆಗಳ ಸೌಲಭ್ಯಗಳನ್ನು ಸಮರ್ಪಕ ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಬಿ.ದೇವೇಂದ್ರಪ್ಪ ಕಿವಿಮಾತು ಹೇಳಿದರು.

ಸೋಮವಾರ ತಾಲ್ಲೂಕಿನ ಗುರುಸಿದ್ದಾಪುರ ಗ್ರಾಮದಲ್ಲಿ ಕೃಷಿ ಇಲಾಖೆ ಹಾಗೂ ರೈತರ ಸಹಯೋಗದಲ್ಲಿ 2024-25 ನೇ ಸಾಲಿನ ಆತ್ಮಯೋಜನೆ ಹಾಗೂ ಆಹಾರ ಮತ್ತು ಪೌಷ್ಠಿಕ ಭದ್ರತೆ ಯೋಜನೆಯಡಿ ಆಯೋಜಿಸಲಾಗಿದ್ದ ರಾಷ್ಟ್ರೀಯ ರೈತ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸಕ್ತ ಸಾಲಿನಲ್ಲಿ ಅತಿವೃಷ್ಠಿ ಹಾಗೂ ಸಿರಿಗೆರೆ ಶ್ರೀಗಳ ದೂರದೃಷ್ಠಿಯ ಶಾಶ್ವತ ಯೋಜನೆ 57 ಕೆರೆ ತುಂಬಿಸುವ ಯೋಜನೆಯಿಂದ ಕೆರೆಗಳು ಕೋಡಿ ಬಿದ್ದಿವೆ.ಹಳ್ಳಕೊಳ್ಳಗಳು ಮೈದುಂಬಿ ಹರಿಯುತ್ತಿದ್ದು, ಭವಿಷ್ಯದಲ್ಲಿ ರೈತರ ಬದುಕು ಹಸನಾಗಲಿದೆ ಎಂದರು.

ಕಾರ್ತಿಕಮಾಸದಲ್ಲಿ ರೈತರು ಬೆಳೆದ ಫಸಲುಗಳನ್ನು ಹಸನುಗೊಳಿಸಿ ರಾಶಿಪೂಜೆ, ದವಸ ಧಾನ್ಯಗಳನ್ನು ಕಣಜದಲ್ಲಿ ಸಂಗ್ರಹಿಸಿ ವಾಣಿಜ್ಯ ಬೆಳೆಗಳನ್ನು ಮಾರಾಟಮಾಡುವುದು ಪೂರ್ವಜರ ಕಾಲದಿಂದ ವಾಡಿಕೆಯಾಗಿದೆ.



ರೈತರು ಪಡುವ ಶ್ರಮದಿಂದ ಬೆವರಿನ ಹನಿ ಭೂ ಒಡಲಿಗೆ ಬಿದ್ದಾಗ ಭೂ ತಾಯಿ ಸಂತೃಪ್ತಿಯಾಗುತ್ತಾಳೆ ಎಂಬ ಪ್ರತೀತಿಯಿದೆ ಎಂದು ಹೇಳಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ದೇಶದಲ್ಲಿ ರೈತ ಪರವಾದ ಕಾಯ್ದೆ ಕಾನೂನು, ನೀತಿ ನಿಯಮಗಳನ್ನು, ರೂಪಿಸಿದ ಮಾಜಿ ಪ್ರಧಾನಿ ಚರಣ್ ಸಿಂಗ್ ಚೌಧರಿ ಅವರ ಜನ್ಮದಿನವನ್ನು ರೈತ ದಿನವನ್ನಾಗಿ ಆಚರಿಸುವ ಮೂಲಕ ರೈತರ ಭಾವನೆಗಳಿಗೆ ಸ್ಪಂದಿಸಲಾಗುತ್ತಿದೆ ಎಂದರು.

**ಜಗಳೂರು ಶಾಸಕ ಬಿ.ದೇವೇಂದ್ರಪ್ಪ**

ರಾಗಿ ಬೆಳೆ ಕೃಷಿ ಚಟುವಟಿಕೆಗಳಿಂದ ಬೇಸತ್ತ ರೈತರು ಕೆಲ ವರ್ಷಗಳಿಂದ ರಾಗಿ ಬೆಳೆ ಬಿತ್ತನೆ ಇಳಿಮುಖವಾಗಿತ್ತು. ಪ್ರಸಕ್ತ ಸಾಲಿನಲ್ಲಿ ರಾಗಿ ಬಿತ್ತನೆ ಹಾಗೂ ಕಟಾವಿಗೆ ಯಾಂತ್ರೀಕರಣದ ಸಹಾಯ ದಿಂದ ರಾಗಿ ಬೆಳೆದು ಅಧಿಕ ಸಂಖ್ಯೆಯಲ್ಲಿ ರೈತರು ರಾಗಿ ಬಿತ್ತನೆಗೆ ಮುಂದಾಗಿರುವುದು ಶ್ಲಾಘನೀಯ. ರಾಗಿಯನ್ನು ಹಿಟ್ಟಾಗಿ ಮೌಲ್ಯವರ್ಧನೆಗೊಳಿಸಿದರೆ ಅಧಿಕ ಲಾಭಗಳಿಸಬಹುದು.

ಗುರುಸಿದ್ದಾಪುರ ಗ್ರಾಮದ ಸುಸ್ಥಿರ ಅಭಿವೃದ್ಧಿಗಾಗಿ 55 ಹಸುಗಳನ್ನು ನೀಡಲಾಗಿತ್ತು.ಇದರಿಂದ ಪ್ರತಿ ವರ್ಷ ಗ್ರಾಮಕ್ಕೆ 30 ಲಕ್ಷ ಆದಾಯ ಗಳಿಕೆಯಾಗುತ್ತಿದೆ.ವಿವಿಧ ಯೋಜನೆಯಡಿ ಪ್ರತಿ ಫಲಾನುಭವಿಗಳಿಗೆ 15 ಲಕ್ಷ ವರೆಗೆ ಸಹಾಯಧನಕ್ಕೆ ಇಲಾಖೆ ನೆರವಾಗಲಿದೆ ರೈತರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮಕ್ಕೂ ಮುನ್ನ ಎತ್ತಿನಬಂಡಿಯಲ್ಲಿ ಶಾಸಕರ ಮೆರವಣಿಗೆ, ಪೂರ್ಣ ಕುಂಭಮೇಳ, ವಾದ್ಯವೃಂದ, ನೃತ್ಯ, ಕೋಲಾಟ, ಸಿರಿಧಾನ್ಯ ಪ್ರಾತ್ಯ ಕ್ಷಿಕೆ ಸಂಭ್ರಮ ದಿನಾಚರಣೆಗೆ ಮೆರಗು ತಂದವು.

ಕಾರ್ಯಕ್ರಮದಲ್ಲಿ ತಾಲ್ಲೂಕಿನ ವಿವಿಧ ಗ್ರಾಮಗಳ ಸಾಧಕ ರೈತರಿಗೆ 'ಕೃಷಿ ಮಿತ್ರ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾ.ಪಂ ಅಧ್ಯಕ್ಷ ರಮೇಶ್, ಸದಸ್ಯರಾದ ಮಂಜಮ್ಮ ಮೂಗಪ್ಪ, ಹಳ್ಳಿ ಚೌಡಪ್ಪ, ಪ.ಪಂ ಸದಸ್ಯ ರಮೇಶ್ ರೆಡ್ಡಿ, ಮುಖಂಡರಾದ ಸಣ್ಣಸೂರಜ್ಜ, ಮಂಜಣ್ಣ, ಬಿ. ಮಹೇಶ್ವರಪ್ಪ, ಪಲ್ಲಾಗಟ್ಟೆ ಶೇಖರಪ್ಪ, ಗುರುಸಿದ್ದಾಪುರ ಗ್ರಾಮದ ಗಿರೀಶ್, ರಮೇಶ್, ಬಸವರಾಜ್, ಆನಂದಪ್ಪ, ಅಂಜಿನಪ್ಪ, ಓಬಳೇಶ್, ದಳಪತಿ ಬಸೆಟೆಪ್ಪ, ರೈತ ಸಂಘಟನೆ ಮುಖಂಡರಾದ ರಾಜನಹಟ್ಟಿ ರಾಜು, ಜಮ್ಮಾಪುರ ರೈತ ರಂಗಪ್ಪ, ಸತೀಶ್, ರವಿಕುಮಾರ್, ಕೃಷಿ ಇಲಾಖೆ ಎಡಿಸಿ ಶ್ವೇತಾ, ಜೀವಿತ ಮತ್ತು ಇತರರು ಉಪಸ್ಥಿತರಿದ್ದರು.

# ಜಾತಿ, ಧರ್ಮದ ಕನ್ನಡಕ ಕಳಚಿದರೆ ಭಾವೈಕ್ಯತೆ

## ಜಗಳೂರು: 'ಸರ್ವಧರ್ಮ ಸಮನ್ವಯ ಹಾಗೂ ಸಾಂಸ್ಕೃತಿಕ' ಕಾರ್ಯಕ್ರಮದಲ್ಲಿ ಸಾಣೇಹಳ್ಳಿ ಶ್ರೀ



ಜಗಳೂರು, ಡಿ. 25 - ಸಮಾಜದಲ್ಲಿ ಜಾತಿ,ಧರ್ಮ,ಭಾಷೆಗಳ ಕನ್ನಡಕ ಕಳಚಿದಾಗ ಭಾವೈಕ್ಯತೆ ಸಾಧ್ಯ ಎಂದು ಸಾಣೆಹಳ್ಳಿ ಶಾಖಾ ಮಠದ ಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಜಿ ಸಲಹೆ ನೀಡಿದರು.

ಬುಧವಾರ ಪಟ್ಟಣದ ಪ್ರೇರಣಾ ಸಮಾಜ ಸೇವಾ ಟ್ರಸ್ಟ್ ವತಿಯಿಂದ ಕ್ರಿಸ್ ಮಸ್ ಹಬ್ಬದ ಅಂಗವಾಗಿ ಚರ್ಚ್ ಆವರಣದಲ್ಲಿ ಆಯೋಜಿಸಲಾಗಿದ್ದ 'ಸರ್ವಧರ್ಮ ಸಮನ್ವಯ ಹಾಗೂ ಸಾಂಸ್ಕೃತಿಕ' ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಮಂದಿರ, ಮಸೀದಿ, ಚರ್ಚ್‌ಗಳ ಪ್ರಾರ್ಥನೆಯೊಂದಿಗೆ ಕೇವಲ ಮಾನ ಮತ್ತು ಧ್ಯಾನಕ್ಕೆ ಆದ್ಯತೆ ನೀಡದೆ 12 ನೇ ಶತಮಾನದಲ್ಲಿ ಬಸವಣ್ಣನ ವಚನ ಸಾಹಿತ್ಯದ ಮೂಲಕ ಜಗತ್ತಿಗೆ ಸಾರಿದ ಸೂತ್ರಗಳನ್ನು ಪಾಲಿಸಿದರೆ ಮಾತ್ರ ಅಂತರಂಗ ಹಾಗೂ ಬಹಿರಂಗ ಶುದ್ಧಿಗೊಳ್ಳುವುದು. ಬಹಿರಂಗದಿಂದ ಅಂತರಂಗ ಶುದ್ಧಿಗೊಳಿಸುವುದು ಪ್ರತಿಯೊಂದು ಧರ್ಮದ ತಾತ್ಪರ್ಯವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ತಪ್ಪು ಮರುಕಳಿಸದಂತೆ ಜಾಗೃತರಾಗುವುದೇ ಪ್ರಾಯಶ್ಚಿತ್ತವಾಗಿದೆ. ಆದರೆ ಧರ್ಮದ ಜಗಲಿ ಮೇಲೆ ಕುಳಿತ ಜನರೇ ಪ್ರಾಯಶ್ಚಿತ್ತದ ರೂಪದಲ್ಲಿ ಮೌಢ್ಯತೆ, ಕಂದಾಚಾರಗಳ ಕೂಪಕ್ಕೆ ತಳ್ಳುವುದು ಆತಂಕಕಾರಿ ಬೆಳವಣಿಗೆ. ನಾವು ಗೌರವಿಸಬೇಕಾದದು ದೇವರುಗಳನ್ನಲ್ಲ. ಜನ್ಮ ನೀಡಿದ ತಂದೆ, ತಾಯಿಗಳನ್ನು ಎಂಬುದನ್ನು ಮರೆಯಬಾರದು.ಲೋಕಕಲ್ಯಾಣಕ್ಕಾಗಿ ಪ್ರಾಣ ತ್ಯಾಗಮಾಡಿದ ಯೇಸುವಿನ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಾನ್ ಬಾಸ್ಕೋ ಸಂಸ್ಥೆಯ ನಿರ್ದೇಶಕ ಫಾದರ್ ರೆಕ ಜೇಕಬ್, ಪ್ರೇರಣಾ ಚರ್ಚ್ ನ ಫಾದರ್ ಸಿಲ್ವೆಸ್ಟರ್, ಹಿರಿಯ ನಾಗರೀಕರ ಸಂಘದ ತಾಲ್ಲೂಕು ಅಧ್ಯಕ್ಷ ಸಿ. ತಿಪ್ಪೇಸ್ವಾಮಿ, ಶಾಹಿನಾ ಬೇಗಂ, ಮಂಜುನಾಥ ಗುರೂಜಿ, ಕರವೇ ಮಹಾಂತೇಶ್, ಪಿ.ಎಸ್. ಅರವಿಂದನ್, ಜಿ.ಎಸ್. ಚಿದಾನಂದ್, ಸಿದ್ದಮ್ಮನಹಳ್ಳಿ ಇಂದಿರಾ, ಮಲ್ಲಿಕಾರ್ಜುನ್, ವಕೀಲ ಕರಿಬಸಯ್ಯ ಉಪಸ್ಥಿತರಿದ್ದರು.

## ನಗರದಲ್ಲಿ ಇಂದಿನಿಂದ ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಓಶೋ ಧ್ಯಾನ ಶಿಬಿರವನ್ನು ಇಂದಿನಿಂದ ಇದೇ ದಿನಾಂಕ 29ರವರೆಗೆ ಪ್ರತಿದಿನ ಬೆಳಿಗ್ಗೆ 6 ರಿಂದ 7.30ರವರೆಗೆ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ ಎಂದು ಅರ್ಚನ (97385 72318), ಪುಷ್ಪ (90367 19573) ತಿಳಿಸಿದ್ದಾರೆ.

# ಹರಿಹರ ಗ್ರಾಮದೇವತೆ ಜಾತ್ರೆ 21.88 ಲಕ್ಷ ಕಾಣಿಕೆ ಹಣ ಸಂಗ್ರಹ



ಹರಿಹರ, ಡಿ.25- ನಗರದಲ್ಲಿ ಬರುವ ಮಾರ್ಚ್ ತಿಂಗಳಲ್ಲಿ ಜರುಗುವ ಗ್ರಾಮದೇವತೆ ಊರಮ್ಮದೇವಿ ಜಾತ್ರೆಯ ಕಸಬಾ ಭಾಗದ ಡಬ್ಬಿ ಗಡಿಗೆ ದೇಣಿಗೆ ಕಾಣಿಕೆಯನ್ನು ಇಂದು ಎಣಿಕೆ ಮಾಡಲಾಯಿತು 21,88,380 ರೂಪಾಯ ಹಣ ಸಂಗ್ರಹವಾಗಿದೆ ಎಂದು ಕಸಬಾ ಗೌಡ್ರು ಲಿಂಗರಾಜ್ ಪಾಟೇಲ್ ಮತ್ತು ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ ತಿಳಿಸಿದರು.

ಮಾಜೇನಹಳ್ಳಿ ಭಾಗದಲ್ಲಿ ನಾಡಿದ್ದು ದಿನಾಂಕ 27ರ ಶುಕ್ರವಾರದಿಂದ ದೇಣಿಗೆ ಸಂಗ್ರಹಕ್ಕೆ ಚಾಲನೆ ನೀಡಲಾಗುತ್ತದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಉತ್ಸವ ಸಮಿತಿಯ ಅಧ್ಯಕ್ಷ ಹಾರ್ನಳ್ಳಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಗಿರೀಶ್ ಗೌಡ್ರು, ಖಜಾಂಚಿ ಕೆಂಚಪ್ಪ, ಸಹ ಕಾರ್ಯದರ್ಶಿ ಸಿದ್ದಪ್ಪ ಬಣಕಾರ, ಆಂಜನೇಯಸ್ವಾಮಿ ಸಿದ್ದಪ್ಪ, ಆಂಜನೇಯ, ಶಾನಬೋಗರು ಗಿರೀಶ್ , ಮುಖಂಡರಾದ ಕೆ. ಜಡಿಯಪ್ಪ, ಕೆ. ಬಿ ರಾಜಶೇಖರ್, ಬಸವರಾಜ್ ಪಾಟೀಲ್, ಜಿ ನಂಜಪ್ಪ, ಶೇರಾಪುರ ರಾಜಣ್ಣ, ಬೆಣ್ಣೆ ಸಿದ್ದೇಶ್ ಪರಮೇಶ್ವರಪ್ಪ ನೀಲಗುಂದ, ಎಂ. ಚಿದಾನಂದ ಕಂಚಿಕೇರಿ, ಶೇಖರಗೌಡ ಪಾಟೀಲ್, ಮಂಜುನಾಥ್, ಪಾಲಾಕ್ಷಪ್ಪ, ಶಶಿಧರ್ ಆನ್ವೇರಿ, ಸಂಗನಾಳ ಮಠ, ಮನೋಹರ, ಹನುಮಂತಪ್ಪ ಸುರ್ವೆ, ಐರಣಿ ಬೀರಪ್ಪ, ತಿಮ್ಮೇಶ, ನಲ್ಲಿ ಬಸವರಾಜ್ ಅರ್ಚಕರಾದ ಈರಣ್ಣ, ನಾಗರಾಜ್, ಈರಪ್ಪಜ್ಜ, ಪ್ರವೀಣ್ ಇತರರು ಹಾಜರಿದ್ದರು.

# ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಡಾ. ಎ.ಬಿ. ರಾಮಚಂದ್ರಪ್ಪ ಅವರಿಗೆ ಸನ್ಮಾನ



ಹರಿಹರ, ಡಿ.25- ಸಾಹಿತ್ಯ, ಸಂಸ್ಕೃತಿ, ಸಮಾಜಮುಖಿ ಹೋರಾಟದ ಹಿನ್ನೆಲೆ ಹೊಂದಿರುವ ಡಾ. ಎ.ಬಿ. ರಾಮಚಂದ್ರಪ್ಪ ಅವರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗುವಂತಹ ಅವಕಾಶ ಸಂದಿರುವುದು ಸಂತಸದ ವಿಚಾರ ಎಂದು ನಿವೃತ್ತ ಪ್ರಾಧ್ಯಾಪಕ ಹೆಚ್. ಎ. ಭಿಕ್ಷಾವರ್ತಿಮಠ ಹೇಳಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಮ್ಯಾಂಗೊ ಗಾರ್ಡನ್ ಸಭಾಂಗಣದಲ್ಲಿ 14ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡಾ.ಎ.ಬಿ. ರಾಮಚಂದ್ರಪ್ಪನವರಿಗೆ ಹಮ್ಮಿಕೊಳ್ಳಲಾಗಿದ್ದ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿರಿಯ ಸಾಹಿತಿ ಜೆ.ಕಲಿಂ ಬಾಷಾ ಮಾತನಾಡಿ, ರಾಮಚಂದ್ರಪ್ಪ ಬಹುಮುಖ ಪ್ರತಿಭೆವುಳ್ಳ ವ್ಯಕ್ತಿಯಾಗಿದ್ದು, ಸುಮಾರು ಮೂರು ನಾಲ್ಕು ದಶಕಗಳಿಂದ ಹರಿಹರ ತಾಲ್ಲೂಕಿನ ಜನತೆಯಲ್ಲಿ ಉತ್ತಮ ಸಂಬಂಧ ಹೊಂದಿರುವ ವ್ಯಕ್ತಿ ಆಗಿರುವುದರಿಂದ ಸಮ್ಮೇಳನದಲ್ಲಿ ಹರಿಹರ ನಗರದ ಸಮಸ್ಯೆಗಳ ಬಗ್ಗೆ ತಮ್ಮ ಛಾಪನ್ನು ಮೂಡಿಸುವ ಕೆಲಸವನ್ನು ಮಾಡಲಿ ಎಂದು ಹೇಳಿದರು.

ಡಿ.ಸಿ.ಸಿ ಬ್ಯಾಂಕ್ ಉಪಾಧ್ಯಕ್ಷ ಡಿ. ಕುಮಾರ್, ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ಸಿ. ಎನ್. ಹುಲಗೇಶ್, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಎ.ಕೆ. ಭೂಮೇಶ್ ಮಾತನಾಡಿ, ತಳ ಸಮುದಾಯದಿಂದ ಬಂದಿರುವ ಎ.ಬಿ. ರಾಮಚಂದ್ರಪ್ಪ ಅವರನ್ನು ಗುರುತಿಸಿ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆ ಮಾಡಿರುವುದು ತಳ ಸಮುದಾಯದ ಜನರಿಗೆ ಸಂತಸವನ್ನು ತರಿಸಿದೆ ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ. ಎ.ಬಿ. ರಾಮಚಂದ್ರಪ್ಪ, ನಾಲ್ಕು ದಶಕಗಳಿಂದ ಇಲ್ಲಿನ ಜನತೆಯ ಒಡನಾಟವನ್ನು ಹೊಂದಿರುವ ನಾನು ವಿದ್ಯಾರ್ಥಿ ಜೀವನದಲ್ಲಿ ಹೋರಾಟ ನಡೆಸಿದ ಕಾಲೇಜಿನಲ್ಲಿಯೇ ಪ್ರಾಧ್ಯಾಪಕನಾಗಿ ಸೇವೆ ಮಾಡುವಂತಹ ಸೌಭಾಗ್ಯ ಸಿಕ್ಕಿದ್ದು ನನ್ನ ಜೀವನದಲ್ಲಿ ಮರೆಯಲಾಗದ ಘಟನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ನಿಖಿಲ್ ಕೊಂಡಜ್ಜಿ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿಗಳಾದ ರೇವಣಸಿದ್ದಪ್ಪ, ಎಂ. ಚಿದಾನಂದ ಕಂಚಿಕೇರಿ, ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ವಿಜಯ ಮಹಾಂತೇಶ್, ರಾಜ್ಯ ಪರಿಷತ್ ಸದಸ್ಯ ಎಂ. ಉಮ್ಮಣ್ಣ, ಕುಮಾರನಹಳ್ಳಿ ಮಂಜುನಾಥ್ ಪಟೇಲ್, ಜಿಗಳಿ ಆನಂದಪ್ಪ, ವೀರಯ್ಯ, ತಾಲ್ಲೂಕು ಸಂಘಟನಾ ಕಾರ್ಯದರ್ಶಿ ನಾಗರಾಜ್, ಬಿರ್ಲಾ, ಸಾಹಿತ್ಯ ಸಂಗಮದ ಅಧ್ಯಕ್ಷ ವಿ.ಬಿ. ಕೊಟ್ರೇಶ್, ನಗರಸಭೆ ಸದಸ್ಯ ಕೆ.ಬಿ. ರಾಜಶೇಖರ್, ಸಿರಿಗೆರೆ ಕುಂದೂರು ಮಂಜಪ್ಪ, ನರೇಂದ್ರ ಬಿಳಸನೂರು, ವಾಸುದೇವ ಕುಂಬಳೂರು, ಕಡೆಮನೆ ನಾಗೇಂದ್ರಪ್ಪ ಸಿರಿಗೆರೆ, ದಾವಣಗೆರೆ ನಿವೃತ್ತ ಇಂಜಿನಿಯರ್ ಮಹಾಂತಪ್ಪ, ಜಯಪ್ಪ, ನಿವೃತ್ತ ಶಿಕ್ಷಕ ಜಿ.ಆರ್.ನಾಗರಾಜ್, ನಿವೃತ್ತ ಯೋಧ ಪರಶುರಾಮ್, ದೊಗ್ಗಳ್ಳಿ ಚಂದ್ರಪ್ಪ, ಜಿಗಳಿ ಮಂಜುನಾಥ್ ಇತರರು ಹಾಜರಿದ್ದರು.

ಕಸಾಪ ತಾಲ್ಲೂಕು ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಪರಮೇಶ್ವರಪ್ಪ ಕತ್ತಿಗೆ ಪ್ರಾರ್ಥಿಸಿದರು. ಜಿಗಳಿ ಪ್ರಕಾಶ್ ಸ್ವಾಗತಿಸಿದರು. ವಿ.ಬಿ. ಕೊಟ್ರೇಶ್ ನಿರೂಪಿಸಿದರೆ ರೇವಣಸಿದ್ದಪ್ಪ ಅಂಗಡಿ ವಂದಿಸಿದರು.

## ನಗರದ ಸಿದ್ದಗಂಗಾ ವಿದ್ಯಾಸಂಸ್ಥೆಯಲ್ಲಿ ಇಂದು ಶಾಲಾ ವಾರ್ಷಿಕೋತ್ಸವ

ಸಿದ್ದಗಂಗಾ ವಿದ್ಯಾಸಂಸ್ಥೆಯಲ್ಲಿ ಸಂಸ್ಥೆಯ 55ನೇ ವಾರ್ಷಿಕ ಸಂಭ್ರಮಾಚರಣೆ ಇಂದು ಸಂಜೆ 5.30ಕ್ಕೆ ನಡೆಯಲಿದೆ ಎಂದು ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೋಜಾ ತಿಳಿಸಿದ್ದಾರೆ.

ಉಡುಪಿಯ ಡಾ. ಎ.ವಿ. ಬಾಳಿಗಾ ಸ್ಮಾರಕ ಆಸ್ಪತ್ರೆಯ ವೈದ್ಯ ಹಾಗೂ ಲೇಖಕ ಡಾ.ವಿರೂಪಾಕ್ಷ ದೇವರಮನೆ ಕಾರ್ಯಕ್ರಮ ಉದ್ಘಾಟಿಸಲಿದ್ದು, 2023-24ನೇ ಸಾಲಿನ ದ್ವಿತೀಯ ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ 400 ವಿದ್ಯಾರ್ಥಿಗಳಲ್ಲಿ 132 ಮಕ್ಕಳಿಗೆ 'ಸಿದ್ಧಗಂಗಾ ಪ್ರತಿಭಾ ಪುರಸ್ಕಾರ' ನೀಡಲಾಗುವುದು ಎಂದರು.

## ನಗರದಲ್ಲಿ ಇಂದು ಪ್ರಾಥಮಿಕ ಸಹಕಾರಿ ಕೃಷಿ ಬ್ಯಾಂಕ್ ಕಟ್ಟಡದ ಶಂಕುಸ್ಥಾಪನೆ

ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತದ ನೂತನ ಬ್ಯಾಂಕ್ ಕಟ್ಟಡದ ಶಂಕುಸ್ಥಾಪನೆ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ್ ಕಚೇರಿ ಎದುರಿನ ರಾಷ್ಟ್ರೀಯ ಹೆದ್ದಾರಿ ರಸ್ತೆಯಲ್ಲಿರುವ ರವೀಂದ್ರನಾಥ್ ಬಡಾವಣೆಯಲ್ಲಿ ನಡೆಯಲಿದೆ.

ಬ್ಯಾಂಕ್ ಶಂಕುಸ್ಥಾಪನೆಯನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಂಸದ ಜಿ.ಎಂ ಸಿದ್ದೇಶ್ವರ, ರಾಜ್ಯ ಭೂ ಬ್ಯಾಂಕ್ ಅಧ್ಯಕ್ಷ ಕೆ. ಷಡಕ್ಷರಿ, ಶಾಸಕ ಕೆ.ಎಸ್ ಬಸವಂತಪ್ಪ ಸೇರಿದಂತೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ನದಿ ಜೋಡಣೆ ಯೋಜನೆಗೆ ಶಿಲಾನ್ಯಾಸ

**(1ನೇ ಪುಟದಿಂದ)** ಜನರಿಗೆ ಕುಡಿಯುವ ನೀರಿನ ಸೌಲಭ್ಯ ಸಿಗಲಿದೆ.ಯೋಜನೆಯಿಂದ 7.18 ಲಕ್ಷ ಕೃಷಿ ಕುಟುಂಬಗಳಿಗೆ ನೆರವು ಸಿಗಲಿದೆ. 103 ಮೆಗಾವ್ಯಾಟ್ ಜಲವಿದ್ಯುತ್ ಉತ್ಪಾದನೆಯು ಸಾಧ್ಯವಾಗಲಿದೆ. ಇದೇ ವೇಳೆ ಖಂಡ್ವಾ ಜಿಲ್ಲೆಯ ಓಂಕಾರೇಶ್ವರ ತೇಲುವ ಸೌರ ಯೋಜನೆಯನ್ನೂ ಉದ್ಘಾಟಿಸಲಾಗಿದೆ.


## ಗ್ರಾಮ ಪಂಚಾಯಿತಿ ಕಾರ್ಯಾಲಯ, ನಲ್ಕುದುರೆ

ತಾಲ್ಲೂಕು ಪಂಚಾಯಿತಿ: ಚನ್ನಗಿರಿ ಜಿಲ್ಲಾ ಪಂಚಾಯಿತಿ: ದಾವಣಗೆರೆ

ನಂ:ಗ್ರಾಪಂನ.ಕ.ಸಿ.ಆರ್./2024-25 ದಿನಾಂಕ : 24/12/2024

**ಟೆಂಡರ್ ಪ್ರಕಟಣೆ**

**ವಿಷಯ: 2024-25ನೇ ಸಾಲಿನ ಆರ್ ಜಿ ಎಸ್ ವೈ ಯೋಜನೆಯಡಿ ನಲ್ಕುದುರೆ ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣ ಕಾಮಗಾರಿ ಮಾಡಲು ಇ-ಟೆಂಡರ್ ಆಹ್ವಾನಿಸುವ ಕುರಿತು**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚನ್ನಗಿರಿ ತಾಲ್ಲೂಕಿನ ನಲ್ಕುದುರೆ ಗ್ರಾಮ ಪಂಚಾಯಿತಿಯ 2024- 25ನೇ ಆರ್ ಜಿ ಎಸ್ ವೈ ಯೋಜನೆಯಡಿ ನಲ್ಕುದುರೆ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣ ಕಾಮಗಾರಿ ಕೋಡ್ RDPR/2024-25/BD/WORK_INDENT11732 ಸದರಿ ಕಾಮಗಾರಿಯನ್ನು ಇ-ಟೆಂಡರ್ ಪ್ರಕ್ರಿಯೆಯ ಮೂಲಕ ನಲ್ಕುದುರೆ ಗ್ರಾಮ ಪಂಚಾಯಿತಿ ಕಛೇರಿಯಿಂದ ಆಹ್ವಾನಿಸಲಾಗಿದೆ. ಹಾಗೂ ಸದರಿ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ www.Kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಲು ಕೋರಿದೆ.

**1) ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02/01/2025 ಮಧ್ಯಾಹ್ನ: 05.00 ಗಂಟೆ**

**2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 03/01/2025 ಮಧ್ಯಾಹ್ನ: 05:15 ಗಂಟೆ**

**3) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 04/01/2025 ಮಧ್ಯಾಹ್ನ: 05:30 ಗಂಟೆ**

ಭಾಗವಹಿಸುವವರು ಅಂದಾಜು ಮೊತ್ತದ ಶೇ. 2.5 ರಷ್ಟು ಇ ಎಂ ಡಿ ಮೊತ್ತವನ್ನು ಆನ್‌ಲೈನ್ ಮೂಲಕ ಸಲ್ಲಿಸಲಾಗುವುದು.

ಸಹಿ/-
**ಅಧ್ಯಕ್ಷರು**
ಗ್ರಾಮ ಪಂಚಾಯಿತಿ, ನಲ್ಕುದುರೆ

ಸಹಿ/-
ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯಿತಿ, ನಲ್ಕುದುರೆ


# ಲಾಠಿಜಾರ್ಜ್‌ನಲ್ಲಿ ಗಾಯಗೊಂಡ ರುದ್ರಗೌಡ್ರ ಮನೆಗೆ ಶ್ರೀಗಳ ಭೇಟಿ

ಹರಿಹರ, ಡಿ.25- ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ಪೊಲೀಸರು ಅನುಚಿತ ವಾಗಿ ವರ್ತಿಸಿ, ಅಮಾನುಷವಾಗಿ ನಡೆದುಕೊಂಡ ಕಹಿ ಘಟನೆಯಿಂದ ಸಮಾಜದ ಜನರಿಗೆ ನೋವು ತರಿಸಿದೆ ಎಂದು ಪಂಚಮಸಾಲಿ ಸಮಾಜದ ಗುರುಪೀಠಾಧ್ಯಕ್ಷರಾದ ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಬೆಳಗಾವಿ ನಗರದ ಪಂಚಮಸಾಲಿ 2ಎ ಮೀಸಲಾತಿ ಹೋರಾಟದ ಸಮಯದಲ್ಲಿ ಪೊಲೀಸ್ ಲಾಠಿ ಚಾರ್ಜ್ ವೇಳೆ ನಗರದ ವಕೀಲರಾದ ರುದ್ರಗೌಡ್ರು ಪೆಟ್ಟು ತಿಂದ ಗಾಯಗೊಂಡಿದ್ದು, ಶ್ರೀಗಳು ಅವರ ಮನೆಗೆ ಭೇಟಿ ಕೊಟ್ಟು ಅವರಿಗೆ ಆತ್ಮಸ್ಥೈರ್ಯ ತುಂಬಿ ಮಾತನಾಡಿದರು.

ಸರ್ಕಾರದ ಮಾನದಂಡಗಳಿದ್ದರೂ ಸಹ ಅದನ್ನು ಪರಿಗಣಿಸದೇ ದಿಢೀರ್ ಹೋರಾಟಗಾರರ ಮೇಲೆ ಲಾಠಿ ಚಾರ್ಜ್ ಮಾಡಿ ಸಮಾಜದ ಜನರ ಸ್ವಾಭಿಮಾನದ ಹೋರಾಟಕ್ಕೆ ಧಕ್ಕೆ ತರುವಂತಹ ಕೆಲಸಕ್ಕೆ ಮುಂದಾಗಿದ್ದು ಖಂಡನೀಯ. ಅಂದಿನ ಘಟನೆ ಬಗ್ಗೆ ಇದುವರೆಗೂ ಸರ್ಕಾರ, ಸಮಾಜದ ಜನರಲ್ಲಿ ಕ್ಷಮಾಪಣೆ ಕೇಳಿಲ್ಲ, ತಪ್ಪಿತಸ್ಥ ಪೊಲೀಸರನ್ನು ಅಮಾನತು ಮಾಡಿ, ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳದಿರುವ ಬಗ್ಗೆ ಸಮಾಜ ಗಮನಿಸಿದೆ ಎಂದು ಹೇಳಿದರು.



ಈ ಘಟನೆಯಿಂದ ಸಮಾಜದ ಯಾರೂ ಧೃತಿಗೆಡುವ ಅವಶ್ಯಕತೆ ಇಲ್ಲ. ಘಟನೆ ಬಗ್ಗೆ ನೋವು ಆಗಿರಬಹುದು. ಆದರೆ ಪಂಚಮಸಾಲಿ ಸಮಾಜವು ದಿನದಿಂದ ದಿನಕ್ಕೆ ಇನ್ನಷ್ಟು ಗಟ್ಟಿಯಾಗುತ್ತಿದ್ದು, ಇದರಿಂದಾಗಿ ಸಂಘಟನೆಯ ಶಕ್ತಿ ಇಮ್ಮಡಿಯಾಗಿದೆ ಎಂದು ತಿಳಿಸಿದರು.

ವಕೀಲ ಪಿ. ರುದ್ರಗೌಡ್ರು ಮಾತನಾಡಿ, ಅಂದಿನ ಘಟನೆ ತಾತ್ಕಾಲಿಕವಾಗಿ ಮನಸ್ಸಿಗೆ ಘಾಸಿ ಆಯಿತು. ಆದರೆ ಗುರುಗಳು ಮನೆಗೆ ಆಗಮಿಸಿ ನಮಗೆ ಮತ್ತು ನಮ್ಮ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿ ನಮಗೆ ಆತ್ಮಸ್ಥೈರ್ಯ ತಂಬಿದ್ದರಿಂದ ಸಮಾಜಕ್ಕಾಗಿ ನಾನು ಅಷ್ಟೇ ಅಲ್ಲದೆ ನನ್ನ ಸಹಪಾಠಿ ಗಳು ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳವಂತೆ ಮಾಡಲು ಪ್ರೇರಣೆ ನೀಡಿದೆ ಎಂದು ಹೇಳಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ ಮಾತನಾಡಿ, ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಜಯ ಮೃತ್ಯುಂಜಯ ಸ್ವಾಮಿಗಳು ಸಮಾಜದ ಕಿರೀಟ ಇದ್ದಂತೆ. ಹಿಂದೆ 2ಎ ಮೀಸಲಾತಿಗಾಗಿ 700 ಕಿಲೋಮೀಟರ್ ಪಾದಯಾತ್ರೆ ಮಾಡಿದರೂ ಸಹ ರಾಜ್ಯದಾದ್ಯಂತ ಒಂದು ಚಿಕ್ಕ ಘಟನೆಯಾಗದಂತೆ ಎಚ್ಚರಿಕೆಯಿಂದ ಹೋರಾಟ ಮಾಡಿದ್ದಾರೆ. ಹಿಂದೆ ಬಿಜೆಪಿ ಸರ್ಕಾರ ಆಡಳಿತದ ವೇಳೆ ನಮಗೆ ಪರಿಗಣಿಸಲಿಲ್ಲ. ಈಗಿನ ಕಾಂಗ್ರೆಸ್ ಪಕ್ಷದ ಸರ್ಕಾರ ನಮ್ಮನ್ನು ಪರಿಗಣಿಸುತ್ತಿಲ್ಲ. ಆದರೆ, ನಮ್ಮ ಸಮಜದ ಮತಗಳು ಮಾತ್ರ ಅವರಿಗೆ ಬೇಕಾಗಿದೆ. ಮುಂದಿನ ದಿನಗಳಲ್ಲಿ ಸಮಾಜದ ಜನರು ಇದರ ಬಗ್ಗೆ ಚರ್ಚೆ ಮಾಡಿ ಒಂದು ಅಂತಿಮ ತೀರ್ಮಾನಕ್ಕೆ ಬರಬೇಕು ಎಂದು ಹೇಳಿದರು.

ಪಂಚಮಸಾಲಿ ಸಮಾಜದ ಜಿಲ್ಲಾ ಅಧ್ಯಕ್ಷ ಆಶೋಕ ಗೊಪನಾಳ, ವಕೀಲ ಬಸವರಾಜ್ ಓಂಕಾರಿ ಮಾತನಾಡಿದರು.

ಈ ಸಂದರ್ಭದಲ್ಲಿ ರಾಜ್ಯ ಪಂಚಮಸಾಲಿ ಯುವ ಘಟಕದ ಕಾರ್ಯದರ್ಶಿ ದಾವಣಗೆರೆ ಬಕ್ಕೆಶ್, ವಕೀಲರಾದ ಬಸವರಾಜ್ ಹುಲಿಗಿನ ಹೊಳೆ, ನಾಗರಾಜ್ ಹಲವಾಗಲು, ರಮೇಶ್ ಜಿ.ಬಿ. ಪ್ರಕಾಶ್ ಬಿ.ಸಿ. ಗಣೇಶ ಬಿ.ಎಸ್. ಹನುಮಂತ ಗೌಡ ಎಂ.ಸಿ. ಪಿಎಸ್‌ಐ ವಿಜಯ ಕುಮಾರ್, ರವಿಕುಮಾರ್ ಇತರರು ಹಾಜರಿದ್ದರು.

## ಹನುಮನಹಳ್ಳಿ ಗ್ರಾಮದ ಶಂಕರಪ್ಪ ನಿಧನ



ದಾವಣಗೆರೆ ತಾಲ್ಲೂಕು ಹನುಮನಹಳ್ಳಿ ಗ್ರಾಮದ ವಾಸಿ ದಿ. ಗುರುಸಿದ್ದಪ್ಪ ಅವರ ಪುತ್ರ, ಶಂಕರಪ್ಪ (76) ಇವರು ದಿನಾಂಕ 25.12.2024ರ ಬುಧವಾರ ಸಂಜೆ 7.30ಕ್ಕೆ ನಿಧನರಾದರು. ಪತ್ನಿ, ನಾಲ್ವರು ಪುತ್ರಿಯರು, ಅಳಿಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.12.2024ನೇಯ ಗುರುವಾರ ಮಧ್ಯಾಹ್ನ12ಕ್ಕೆಸ್ವಗ್ರಾಮ ಹನುಮನಹಳ್ಳಿ ಗ್ರಾಮದಲ್ಲಿ ನೆರವೇರಲಿದೆ.

## ರಸ್ತೆ ಅಪಘಾತದಲ್ಲಿ ಹರಿಹರದ ಒಂದೇ ಕುಟುಂಬದ ನಾಲ್ವರ ಸಾವು



ಹರಿಹರ, ಡಿ. 25 - ಹುಬ್ಬಳ್ಳಿ ಸಮೀಪದ ತಡಸಾ ಕ್ರಾಸ್ ಬಳಿ ನಡೆದ ರಸ್ತೆ ಅಪಘಾತದಲ್ಲಿ ಹರಿಹರದ ನಿವೃತ್ತ ಬಿರ್ಲಾ ಕಂಪನಿಯ ನೌಕರ ಸಿ.ಕೆ. ರುದ್ರುಮನಿ ಸ್ವಾಮಿಯವರ ಪುತ್ರ ಮಹೇಶ್ (41), ಪತ್ನಿ ಅಶ್ವಿನಿ ಮಹೇಶ್ (39), ಪುತ್ರ ಎಂ. ಧನ್ವಿನ್ (11) ಹಾಗೂ ಮಹೇಶ್ ಅವರ ಅತ್ತೆ ಬೆಂಗಳೂರಿನ ಚಂದ್ರಮ್ಮ ಸೇರಿದಂತೆ ಒಟ್ಟು ನಾಲ್ವರು ಬುಧವಾರ ಮಧ್ಯಾಹ್ನ ಮೃತಪಟ್ಟಿದ್ದಾರೆ. ಇವರು ಹರಿಹರ ವಿದ್ಯಾನಗರದ 'ಸಿ' ಬ್ಲಾಕ್, 9 ಕ್ರಾಸ್ ನಿವಾಸಿಗಳು.

# ಸಿಮ್ ಕಾರ್ಡ್ ವಂಚನೆ, ಖಾಸಗಿ ಉದ್ಯಮಕ್ಕೆ 7.5 ಕೋ. ರೂ. ಟೋಪಿ

ಮುಂಬೈ, ಡಿ. 25-ಇಲ್ಲಿನ ಖಾಸಗಿ ಉದ್ಯಮವೊಂದು ಸಿಮ್ ಕಾರ್ಡ್ ಸೈಬರ್ ವಂಚನೆಗೆ ಗುರಿಯಾಗಿದ್ದು, 7.5 ಕೋಟಿ ರೂ.ಗಳನ್ನು ಕಳೆದುಕೊಂಡಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಖಾಸಗಿ ಸಂಸ್ಥೆಗೆ ಸೇರಿದ ಸಿಮ್ ಕಾರ್ಡ್‌ಗೆ ಬರುವ ಓಟಿಪಿಗಳನ್ನು ವಂಚನಾತ್ಮಕವಾಗಿ ಪಡೆದುಕೊಂಡು ಖಾಸಗಿ ಕಂಪನಿಗೆ ಮೋಸ ಮಾಡಲಾಗಿದೆ. ವಂಚನೆಯಾಗಿದ್ದ 7.5 ಕೋಟಿ ರೂ.ಗಳ ಪೈಕಿ 4.65 ಕೋಟಿ ರೂ. ಮೊತ್ತವನ್ನು ಜಪ್ತಿ ಮಾಡುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಸಿಮ್ ವಂಚನೆಯ ಮೂಲಕ ಖಾಸಗಿ ಕಂಪನಿಯ ಬ್ಯಾಂಕ್ ಖಾತೆಗೆ ಪ್ರವೇಶ ಪಡೆದ ವಂಚಕರು ಹಲವು ಅನಧಿಕೃತ ವಹಿವಾಟು ನಡೆಸಿದ್ದಾರೆ. ಕೆಲವೇ ನಿಮಿಷಗಳಲ್ಲಿ ಖಾತೆಯಲ್ಲಿದ್ದ ಹಣವನ್ನು ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದಾರೆ.


ವಂಚನೆಯ ಬಗ್ಗೆ ತಿಳಿದ ಕಂಪನಿಯು ಸೈಬರ್ ಸಹಾಯವಾಣಿಯಾದ 1930ಗೆ ಕರೆ ಮಾಡಿ ವಂಚನೆಯ ಬಗ್ಗೆ ತಿಳಿಸಿತ್ತು. ಅನಧಿಕೃತವಾಗಿ ವಹಿವಾಟು ನಡೆಸಿರುವ ವಿವರಗಳ ಈ-ಮೇಲ್ ಸಹ ಕಳುಹಿಸಲಾಗಿತ್ತು.

ಸೈಬರ್ ಅಪರಾಧ ಶಾಖೆಯ ಅಧಿಕಾರಿಗಳು ತಕ್ಷಣವೇ ಸಂಬಂಧಿಸಿದ ಬ್ಯಾಂಕಿನ ನೋಡಲ್ ಅಧಿಕಾರಿಯನ್ನು ಸಂಪರ್ಕಿಸಿದರು. ನಂತರದ ನಾಲ್ಕು ಗಂಟೆಗಳಲ್ಲಿ ವಂಚನೆಯಾಗಿದ್ದ ಹಣದ ಪೈಕಿ 4.65 ಕೋಟಿ ರೂ.ಗಳನ್ನು ತಡೆಯುವಲ್ಲಿ ಯಶಸ್ವಿಯಾದರು. ಆದರೆ, ಉಳಿದ ಹಣವನ್ನು ವಂಚಕರು ಅಷ್ಟರಲ್ಲೇ ಬಿಡಿಸಿಕೊಂಡಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ.

1924-2024
ಬೆಳಗಾವಿ, ಕರ್ನಾಟಕ

ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ

ಗಾಂಧಿ ಭಾರತ



ನಾಳೆ ಬೆಳಗಾವಿಗೆ ಬನ್ನಿ

ಐತಿಹಾಸಿಕ ಬೆಳಗಾವಿ ಕಾಂಗ್ರೆಸ್ ಅಧಿವೇಶನದ
ಶತಮಾನೋತ್ಸವ ಸಮಾರಂಭ

# ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಪುತ್ಥಳಿ ಅನಾವರಣ

ದಿನಾಂಕ : 27-12-2024 • ಸಮಯ : ಬೆಳಗ್ಗೆ 10:30 • ಸ್ಥಳ : ಸುವರ್ಣ ವಿಧಾನಸೌಧ, ಬೆಳಗಾವಿ

1924ರಲ್ಲಿ ನಡೆದ ಐತಿಹಾಸಿಕ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಈಗ ಶತಮಾನೋತ್ಸವದ ಸಂಭ್ರಮ. ಮಹಾತ್ಮ ಗಾಂಧಿ ಅವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಅಧಿವೇಶನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಮುಖ ವಹಿಸಿತ್ತು. ಇದರ ನೆನಪಿಗಾಗಿ ಕರ್ನಾಟಕ ಸರ್ಕಾರ ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಪುತ್ಥಳಿ ಸ್ಥಾಪಿಸಿ ಗೌರವ ಸಲ್ಲಿಸಿದೆ.

**ಪುತ್ಥಳಿ ಅನಾವರಣ**
**ಶ್ರೀ ಮಲ್ಲಿಕಾರ್ಜುನ ಖರ್ಗೆ**
ಮಾನ್ಯ ವಿರೋಧ ಪಕ್ಷದ ನಾಯಕರು, ರಾಜ್ಯಸಭೆ

**ಘನ ಉಪಸ್ಥಿತಿ**
**ಶ್ರೀ ರಾಹುಲ್ ಗಾಂಧಿ**
ಮಾನ್ಯ ವಿರೋಧ ಪಕ್ಷದ ನಾಯಕರು, ಲೋಕಸಭೆ

**ಅಧ್ಯಕ್ಷತೆ**
**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

**ಮುಖ್ಯ ಅತಿಥಿಗಳು**

**ಶ್ರೀ ಬಸವರಾಜ ಎಸ್ ಹೊರಟ್ಟಿ**
ಮಾನ್ಯ ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತು

**ಶ್ರೀ ಯು.ಟಿ. ಖಾದರ್**
ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ

**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪಮುಖ್ಯಮಂತ್ರಿ, ಕರ್ನಾಟಕ ಸರ್ಕಾರ

**ಗೌರವಾನ್ವಿತ ಆಹ್ವಾನಿತರು**

ಶ್ರೀ ಹೆಚ್. ಕೆ. ಪಾಟೀಲ್
ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

ಶ್ರೀ ಸತೀಶ್ ಜಾರಕಿಹೊಳಿ
ಮಾನ್ಯ ಲೋಕೋಪಯೋಗಿ ಹಾಗೂ ಬೆಳಗಾವಿ ಉಸ್ತುವಾರಿ ಸಚಿವರು

ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್
ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು


ಶ್ರೀ ಜಗದೀಶ್ ಎಸ್. ಶೆಟ್ಟರ
ಮಾನ್ಯ ಸಂಸದರು, ಬೆಳಗಾವಿ ಲೋಕಸಭಾ ಕ್ಷೇತ್ರ

ಕುಮಾರಿ ಪ್ರಿಯಾಂಕಾ ಜಾರಕಿಹೊಳಿ
ಮಾನ್ಯ ಸಂಸದರು ಚಿಕ್ಕೋಡಿ ಲೋಕಸಭಾ ಕ್ಷೇತ್ರ

ಶ್ರೀ ಚಲವಾದಿ ಟಿ. ನಾರಾಯಣಸ್ವಾಮಿ
ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ತು

ಶ್ರೀ ಆರ್. ಅಶೋಕ
ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನಸಭೆ

**ವಿಶೇಷ ಆಹ್ವಾನಿತರು :** ಕರ್ನಾಟಕ ರಾಜ್ಯದ ಎಲ್ಲಾ ಮಾನ್ಯ ಸಂಸದರುಗಳು ಹಾಗೂ ಕರ್ನಾಟಕ ರಾಜ್ಯದ ಎಲ್ಲಾ ಮಾನ್ಯ ಶಾಸಕರುಗಳು



ಕರ್ನಾಟಕ ಮಾದರಿ ಆಡಳಿತವು ಗ್ಯಾರಂಟಿ ಯೋಜನೆಗಳನ್ನು ನೂರಕ್ಕೆ ನೂರರಷ್ಟು ಅನುಷ್ಠಾನಗೊಳಿಸುವ ಮೂಲಕ ಮಹಿಳೆಯರು, ಬಡವರು ಮತ್ತು ಶೋಷಿತ ವರ್ಗದವರನ್ನು ಸಬಲೀಕರಣಗೊಳಿಸುತ್ತಾ 'ಗಾಂಧಿ ಭಾರತ'ವನ್ನು ನಿರ್ಮಿಸುವ ಕನಸನ್ನು ನನಸಾಗಿಸುವತ್ತ ಮುನ್ನಡೆಯುತ್ತಿದೆ.

ನಮ್ಮ ಕರ್ನಾಟಕ;
ಗ್ಯಾರಂಟಿ ಕರ್ನಾಟಕ

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ — 10 kg
ಗೃಹಜ್ಯೋತಿ — ಪ್ರತಿ ಮನೆಗೆ 200
ಗೃಹಲಕ್ಷ್ಮಿ — ₹2000
ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

## ಬಿ. ಕಲಪನಹಳ್ಳಿಯಲ್ಲಿ ಮಹೇಶ್ವರ ಜಾತ್ರೆ : ಮಹಿಳೆಯರೂ ಭಾಗಿ



ದಾವಣಗೆರೆ, ಡಿ. 25- ತಾಲ್ಲೂಕಿನ ಬಿ. ಕಲಪನಹಳ್ಳಿ ಶರಣ ಬಸವೇಶ್ವರ (ಅಜ್ಜಯ್ಯನ ಮಠ) ಕಲ್ಯಾಣ ಮಂಟಪದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಜಾತ್ರೆ ನಡೆಯಿತು. ಬೆಳಿಗ್ಗೆ ಶ್ರೀ ಮಹೇಶ್ವರ ಸ್ವಾಮಿಗೆ ಗ್ರಾಮದ ಭಕ್ತಾದಿಗಳು ಪೂಜೆ ಸಲ್ಲಿಸಿ ಮಹಾಮಂಗಳಾರತಿ ನಂತರ ಅನ್ನ, ಬೆಲ್ಲ, ಹಾಲು, ತುಪ್ಪ ವಿಶೇಷವಾಗಿ ಬಾಳೆಹಣ್ಣು ಪ್ರಸಾದ ಸೇವಿಸಿದರು. ರಾತ್ರಿ ಅನ್ನ ಸಾರು ಪ್ರಸಾದ ಸಹ ನಡೆಯಿತು. ಬೆಳಗ್ಗೆ ಪುರುಷರ ಜೊತೆಗೆ ವಿಶೇಷವಾಗಿ ಮಹಿಳೆಯರು ಸಹ ಪ್ರಸಾದ ಸ್ವೀಕರಿಸಿದರು.

## ಮುಖ್ಯಮಂತ್ರಿ ಭೇಟಿ ಮಾಡಿದ ಸಿದ್ದೇಶ್ವರ



ದಾವಣಗೆರೆ, ಡಿ. 25- ಮಹಾರಾಷ್ಟ್ರದ ನೂತನ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರನ್ನು ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಭೇಟಿ ಮಾಡಿ ಶುಭಾಷಯ ತಿಳಿಸಿದರು. ಮಾಜಿ ಸಚಿವ ಮುರುಗೇಶ್ ಆರ್ ನಿರಾಣಿ, ದೌಂಡ್ (ಪುಣೆ)ಯ ಶಾಸಕ ರಾಹುಲ್ ಸುಭಾಷ್ ಕೂಲ್, ಬಿಜೆಪಿ ಯುವ ಮುಖಂಡ ಜಿ.ಎಸ್. ಅನಿತ್‌ಕುಮಾರ್, ಮುಖಂಡ ವೈಭವ್ ಕಾಶಿಕರ್ ಉಪಸ್ಥಿತರಿದ್ದರು.

### ರಾಜ್ಯಮಟ್ಟದ ಬ್ಯಾಡ್ಮಿಂಟನ್ ಸ್ಪರ್ಧೆ

## ಸಂಕಲ್ಪ ಸವದತ್ತಿ ಪ್ರಥಮ, ಚಿರಂತ್ ದ್ವಿತೀಯ



ದಾವಣಗೆರೆ, ಡಿ. 25- ಇಲ್ಲಿನ ಜಿ.ಜಿ. ಅಕಾಡೆಮಿಯಲ್ಲಿ ನಡೆದ 13 ವರ್ಷದ ಒಳಗಿನ ಬಾಲಕರ ರಾಜ್ಯಮಟ್ಟದ ಷಟಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ನಗರದ ಸ್ಫೂರ್ತಿ ಬ್ಯಾಡ್ಮಿಂಟನ್ ಅಕಾಡೆಮಿ ಆಟಗಾರರಾದ ಸಂಕಲ್ಪ ಸವದತ್ತಿ ಪ್ರಥಮ ಹಾಗೂ ಚಿರಂತ್ ದ್ವಿತೀಯ ಸ್ಥಾನ ಪಡೆದಿದ್ದಾರೆ. ಪ್ರಶಸ್ತಿ ಹಾಗೂ ಟ್ರೋಫಿ ಜೊತೆಗೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಗಿದೆ.

## ಖೋ-ಖೋ : ಎಆರ್‌ಎಂ ಕಾಲೇಜು ಪ್ರಥಮ



ದಾವಣಗೆರೆ, ಡಿ.25- ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಅಂತರ ಕಾಲೇಜು ಖೋ-ಖೋ ಪಂದ್ಯಾವಳಿಯಲ್ಲಿ ಎಆರ್‌ಎಂ ಪ್ರಥಮ ದರ್ಜೆ ಕಾಲೇಜು ಪ್ರಥಮ ಸ್ಥಾನ ಗಳಿಸಿದೆ.

# 36 ವರ್ಷಗಳ ನಂತರ ಭಾರತಕ್ಕೆ 'ದಿ ಸೆಟಾನಿಕ್ ವರ್ಸಸ್' ವಾಪಾಸ್

ನವದೆಹಲಿ, ಡಿ. 25- ಭಾರತೀಯ ಮೂಲದ ಬ್ರಿಟಿಷ್ ಲೇಖಕ ಸಲ್ಮಾನ ರಶ್ದಿ ಅವರ ವಿವಾದಿತ 'ದಿ ಸೆಟಾನಿಕ್ ವರ್ಸಸ್' 36 ವರ್ಷಗಳ ನಂತರ ಭಾರತಕ್ಕೆ ವಾಪಾಸ್ಸಾಗಿದೆ. ಈ ಹಿಂದೆ ರಾಜೀವ್ ಗಾಂಧಿ ಸರ್ಕಾರದ ಕಾಲದಲ್ಲಿ ಪುಸ್ತಕದ ಮೇಲೆ ನಿಷೇಧ ಹೇರಲಾಗಿತ್ತು.

ಕಳೆದ ಕೆಲ ದಿನಗಳಿಂದ ರಾಜಧಾನಿ ದೆಹಲಿಯಲ್ಲಿರುವ ಬಹಿರ್‌ಸನ್ಸ್ ಬುಕ್ ಸೆಲ್ಲರ್ಸ್ ಈ ಪುಸ್ತಕವನ್ನು ಮಾರುತ್ತಿದೆ. ಈ ಪುಸ್ತಕ ದೈವ ನಿಂದನೆಯದ್ದಾಗಿದೆ ಎಂದು ವಿಶ್ವದಾದ್ಯಂತ ಮುಸ್ಲಿಂ ಸಂಘಟನೆಗಳು ಆಕ್ಷೇಪಿಸಿದ್ದವು.

ಕೆಲ ದಿನಗಳಿಂದ ನಾವು ಪುಸ್ತಕಗಳನ್ನು ಮಾರುತ್ತಿದ್ದೇವೆ. ಪುಸ್ತಕಕ್ಕೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದು, ಮಾರಾಟವು ಉತ್ತಮವಾಗಿದೆ ಎಂದು ಬಹಿರ್‌ಸನ್ಸ್ ಬುಕ್ ಸೆಲ್ಲರ್ಸ್ ಮಾಲೀಕರಾದ ರಜನಿ ಮಲ್ಹೋತ್ರ ತಿಳಿಸಿದ್ದಾರೆ. ಈ ಪುಸ್ತಕದ ಬೆಲೆ 1,999 ರೂ. ಆಗಿದ್ದು, ದೆಹಲಿ ವಲಯದಲ್ಲಿ ಬಹಿರ್‌ಸನ್ಸ್ ಬುಕ್ ಸೆಲ್ಲರ್ಸ್ ಬಳಿ ಮಾತ್ರ ಲಭ್ಯವಿದೆ.

ಮಿಡ್‌ಲ್ಯಾಂಡ್ ಬುಕ್‌ಶಾಪ್ ಹಾಗೂ ಹೋಂ ಬುಕ್‌ಶಾಪ್ ಸೇರಿದಂತೆ ಇತರೆ ಪುಸ್ತಕದ ಅಂಗಡಿಗಳು ಈ ವಿವಾದಿತ ಪುಸ್ತಕವನ್ನು ಮಾರುವ ಯೋಜನೆ ಹೊಂದಿಲ್ಲ.

ರಾಜೀವ್ ಗಾಂಧಿ ಸರ್ಕಾರ ಈ ಪುಸ್ತಕದ ಆಮದಿನ ಮೇಲೆ ನಿಷೇಧ ಹೇರಿದ್ದನ್ನು ಪ್ರಶ್ನಿಸಿ ದೆಹಲಿ ಹೈ ಕೋರ್ಟ್‌ನಲ್ಲಿ ಅರ್ಜಿಯೊಂದನ್ನು ದಾಖಲಿಸಲಾಗಿತ್ತು. ಆದರೆ ಅಧಿಕಾರಿಗಳು ಪುಸ್ತಕದ ಮೇಲೆ ನಿಷೇಧ ಇದೆ ಎಂಬ ಅಧಿಸೂಚನೆಯನ್ನು ನ್ಯಾಯಾಲಯದ ಎದುರು ಹಾಜರುಪಡಿಸಲು ವಿಫಲವಾಗಿದ್ದರು. ಹೀಗಾಗಿ ಪುಸ್ತಕದ ಮೇಲೆ ನಿಷೇಧ ಇಲ್ಲ ಎಂದು ಭಾವಿಸಬೇಕಾಗುತ್ತದೆ ಎಂದು ಹೈಕೋರ್ಟ್ ತೀರ್ಪು ನೀಡಿತ್ತು.

ಅಕ್ಟೋಬರ್ 5, 1988ರಲ್ಲಿ ಕೇಂದ್ರ ಸರ್ಕಾರ ಪುಸ್ತಕದ ಆಮದು ನಿಷೇಧಿಸುವ ಅಧಿಸೂಚನೆ ಹೊರಡಿಸಿತ್ತು.

ದೈವನಿಂದನೆ ಆರೋಪದಿಂದಾಗಿ ಈ ಪುಸ್ತಕ ವಿವಾದಕ್ಕೆ ಕಾರಣವಾಗಿತ್ತು. ನಂತರ ಇರಾನ್ ನಾಯಕ ರುಹೊಲ್ಲಾ ಖಮೇನಿ ಅವರು ರಶ್ದಿ ವಿರುದ್ಧ ಫತ್ವಾ ಹೊರಡಿಸಿದ್ದರು. ರಶ್ದಿ ಅವರನ್ನು ಹತ್ಯೆ ಮಾಡುವಂತೆ ಮುಸ್ಲಿಮರಿಗೆ ಕರೆ ನೀಡಿದ್ದರು. ನಂತರ ರಶ್ದಿ ಅವರು ಬ್ರಿಟನ್ ಹಾಗೂ ಅಮೆರಿಕಾಗಳಲ್ಲಿ ಸುಮಾರು 10 ವರ್ಷ ಅಡಗಿಕೊಂಡಿದ್ದರು.

ಜುಲೈ 1991ರಲ್ಲಿ ಈ ಪುಸ್ತಕದ ಅನುವಾದ ಮಾಡಿದ್ದ ಜಪಾನಿನ ಹಿತೋಷಿ ಯಗಾರಷಿ ಅವರನ್ನು ಅವರ ಕಛೇರಿಯಲ್ಲೇ ಹತ್ಯೆ ಮಾಡಲಾಗಿತ್ತು.

ಆಗಸ್ಟ್ 12, 2022ರಲ್ಲಿ ಸಮಾರಂಭದ ವೇದಿಕೆಯಲ್ಲಿ ರಶ್ದಿ ಮೇಲೆ ಲೆಬನಾನ್ ಮೂಲದ ಅಮೆರಿಕಾದ ಹಾಡಿ ಮತರ್ ಚೂರಿಯಿಂದ ಹಲ್ಲೆ ನಡೆಸಿದ್ದ. ಇದರಿಂದಾಗಿ ರಶ್ದಿ ಒಂದು ಕಣ್ಣು ಕಳೆದುಕೊಳ್ಳಬೇಕಾಯಿತು.

ಭಾರತದಲ್ಲಿ ಈಗ ಪುಸ್ತಕ ಬಿಡುಗಡೆಯಾಗಿದೆಯಾದರೂ ಇದಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಪುಸ್ತಕದ ಬೆಲೆ ಹೆಚ್ಚಾಯಿತು ಎಂದು ಓದುಗರು ಆಕ್ಷೇಪಿಸಿದ್ದಾರೆ.

ನಾನು ಮುದ್ರಿತ ಪ್ರತಿಯನ್ನು ಬಯಸಿದ್ದೆ. ಆದರೆ ಇದರ ಬೆಲೆ ತೀರಾ ಹೆಚ್ಚಾಗಿದೆ ಎಂದು ಟೆಕ್ ಉದ್ಯಮಿ ಬಾಲ ಸುಂದರೇಷನ್ ಹೇಳಿದ್ದಾರೆ.

ಮುಂದಿನ ದಿನಗಳಲ್ಲಿ ಭಾರತದಲ್ಲೇ ಪುಸ್ತಕ ಪ್ರಕಟಣೆಯಾದರೆ ಬೆಲೆ ಕಡಿಮೆಯಾಗಬಹುದು. ನಾನು ರಶ್ದಿ ಅವರ ಅಭಿಮಾನಿಯಲ್ಲ. ಆದರೆ ಈ ಪುಸ್ತಕದ ಕುರಿತು ಇಷ್ಟು ವರ್ಷಗಳಿಂದ ವಿವಾದ ಇರುವ ಹಿನ್ನೆಲೆಯಲ್ಲಿ ಖರೀದಿಸಿದ್ದೇನೆ ಎಂದವರು ಹೇಳಿದರು.

ಈ ಪುಸ್ತಕ ಭಾರತದ ಸಾಹಿತ್ಯಿಕ ಇತಿಹಾಸದಲ್ಲಿ ಪ್ರಾಮುಖ್ಯತೆ ಪಡೆದಿದೆ. ಸಾಹಿತ್ಯದ ಕಾರಣದಿಂದಲೂ ಈ ಪುಸ್ತಕವನ್ನು ನಿರ್ಲಕ್ಷಿಸಲಾಗದು. ಸೆನ್ಸಾರ್ ವಿರುದ್ಧ ಟೀಕಿಸಲಿಕ್ಕಾದರೂ ಈ ಪುಸ್ತಕವನ್ನು ಖರೀದಿಸಬೇಕಿದೆ ಎಂದು ಸಾಹಿತ್ಯ ವಿದ್ಯಾರ್ಥಿನಿ ರಶ್ಮಿ ಚಟರ್ಜಿ ಹೇಳಿದ್ದಾರೆ.

## ಕೆ.ಬೇವಿನಹಳ್ಳಿಯಲ್ಲಿ ಮಹೇಶ್ವರ ಜಾತ್ರೆ



ಮಲೇಬೆನ್ನೂರು, ಡಿ. 25- ಸುಕ್ಷೇತ್ರ ಕಾಶಿ ಬೇವಿನಹಳ್ಳಿ ಗ್ರಾಮದಲ್ಲಿ ಶ್ರೀ ಮಹೇಶ್ವರ ಸ್ವಾಮಿಯ ಜಾತ್ರೆಯು ಮಂಗಳವಾರ ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ಬೆಳಗಿನ ಜಾವ 5 ಗಂಟೆಗೆ ಬಾವಿಯಲ್ಲಿರುವ ಗಂಗಾ ದೇವಿಗೆ ಪೂಜೆ ಸಲ್ಲಿಸುವ ಮುಖಾಂತರ ಶ್ರೀ ಮಹೇಶ್ವರ ಸ್ವಾಮಿಯನ್ನು ಕರೆದುಕೊಂಡು ಬಂದು ವಿಜೃಂಭಿಸಿದ ನಂತರ ಶ್ರೀ ಮಹೇಶ್ವರ ಸ್ವಾಮಿಗೆ ಅನ್ನ, ಹಾಲು, ಬಾಳೇಹಣ್ಣು, ಬೆಲ್ಲ, ತುಪ್ಪ ನೈವೇದ್ಯ ಮಾಡಿದ ಬಳಿಕ ಸ್ವಾಮಿಗಳು, ಭಕ್ತಾದಿಗಳು ಸೇರಿ ಮಹಾಪಂಕ್ತಿ ನಡೆಸುವುದರೊಂದಿಗೆ ಶ್ರೀ ಮಹೇಶ್ವರ ಸ್ವಾಮಿಯ ಮಹಾ ಪ್ರಸಾದವು ನಡೆಯಿತು.

ಸ್ವಾಮಿಗೆ ಬಂದ ಕಾಣಿಕೆಯನ್ನು ರಾತ್ರಿ ಲೆಕ್ಕ ಮಾಡಿ, ರಾತ್ರಿ 12 ಗಂಟೆಗೆ ಪುನಃ ಶ್ರೀ ಮಹೇಶ್ವರ ಸ್ವಾಮಿಗೆ ಅನ್ನ, ಹಾಲು, ಬಾಳೇಹಣ್ಣು, ಬೆಲ್ಲ, ತುಪ್ಪ ನೈವೇದ್ಯ ಮಾಡಿದ ಬಳಿಕ ಶ್ರೀ ಮಹೇಶ್ವರ ಸ್ವಾಮಿಯನ್ನು ಪುನಃ ಬಾವಿಯಲ್ಲಿ ವಿಜೃಂಭಿಸಿ ಮಹಾಪಂತಿ ನಡೆಸಲಾಯಿತು. ಬುಧವಾರ ಬೆಳಿಗ್ಗೆ ಸ್ವಾಮಿಗೆ ಮನೆಗಳಿಂದ ಎಡೆ ಕೊಡುವುದು, ಹಣ್ಣು, ಕಾಯಿ ಮಾಡಿಸುವುದು, ಸ್ವಾಮಿಗೆ ಬಾಯಿಬೀಗ, ಜವಳ ದಿಂಡು ಉರುಳು ಸೇವೆ ಮಾಡುವುದು ಇನ್ನೂ ಅನೇಕ ಕಾರ್ಯಕ್ರಮಗಳು ಜರುಗಿದವು. ಸಂಜೆ ಶ್ರೀ ರೇವಣಸಿದ್ದೇಶ್ವರ ಸ್ವಾಮಿ ಮತ್ತು ಶ್ರೀ ಬಸವೇಶ್ವರ ಸ್ವಾಮಿ ಹಾಗೂ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ರಥೋತ್ಸವ ಜರುಗಿತು.

ನಾಳೆ ದಿನಾಂಕ 27ರ ಶುಕ್ರವಾರ ಬೆಳಿಗ್ಗೆ 8 ಗಂಟೆಯಿಂದ ಭಕ್ತಾದಿಗಳಿಂದ 108 ಕುಂಭಾಭಿಷೇಕ ನೆರವೇರುವ ಮೂಲಕ ಜಾತ್ರೆಗೆ ತೆರೆ ಬೀಳಲಿದೆ.

## ಅನಂತಮೂರ್ತಿ 92ನೇ ಹುಟ್ಟಹಬ್ಬ ಆಚರಣೆ



ದಾವಣಗೆರೆ, ಡಿ. 25- ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನದ ಪುಸ್ತಕ ಮಳಿಗೆ ಅನ್ವೇಷಣೆ ಪ್ರಕಾಶನದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ.ಯು.ಆರ್.ಅನಂತಮೂರ್ತಿ ಅವರ 92ನೇ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಇದೇ ಸಂದರ್ಭದಲ್ಲಿ ಹಿರಿಯ ಸಾಹಿತಿ ಆರ್.ಜಿ. ಹಳ್ಳಿ ನಾಗರಾಜ್ ಅವರು ಅನಂತಮೂರ್ತಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡುತ್ತಾ, ಅನಂತಮೂರ್ತಿ ಕನ್ನಡ ಸಾರಸ್ವತ ಲೋಕದ ಮಹತ್ವ ಲೇಖಕರಾಗಿದ್ದರು. ಇವರು ಬದುಕಿನುದ್ದಕ್ಕೂ ಹಲವು ತಾತ್ವಿಕ ಭಿನ್ನಾಭಿಪ್ರಾಯಗಳಿಗೆ ರಾಜಿ ಇಲ್ಲದೆ ಬದುಕಿ, ಬರವಣಿಗೆ, ಹೋರಾಟ ನಡೆಸಿದರು ಎಂದರು. ಕನ್ನಡ ಸಾಹಿತ್ಯ ಸಾಂಸ್ಕೃತಿಗೆ ಮಹತ್ವದ ಕೊಡುಗೆ ನೀಡಿದ ಅವರು ಸದಾ ಸ್ಮರಣೀಯರು ಎಂದು ತಿಳಿಸಿದರು.

ರಂಗಕರ್ಮಿ ಕೆ.ಹೆಚ್. ಕುಮಾರ, ವಿಮರ್ಶಕ ಟಿ. ವೆಂಕಟೇಶಮೂರ್ತಿ, ಕವಿ ಜೇನುಗೂಡು ಊಗಿನಹಳ್ಳಿ ಮಹೇಶ್, ಗುಂಡಿಗೆರೆ ವಿಶ್ವನಾಥ್ ಅವರು ಉಪಸ್ಥಿತರಿದ್ದು ಮಾತನಾಡಿ ಅನಂತಮೂರ್ತಿ ಅವರ ಸಾಹಿತ್ಯ ಸೇವೆ ಸ್ಮರಿಸಿದರು.

## ವಾಜಪೇಯಿ ರಾಷ್ಟ್ರ ರಾಜಕಾರಣದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು



**ಹರಪನಹಳ್ಳಿ : ವಾಜಪೇಯಿ ಅವರ 100 ವರ್ಷದ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಕೆ. ಲಕ್ಷ್ಮಣ್**

ಹರಪನಹಳ್ಳಿ, ಡಿ. 25- ವಾಜಪೇಯಿ ಅವರು ಅಜಾತ ಶತ್ರು. ರಾಷ್ಟ್ರ ರಾಜಕಾರಣದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು ಮತ್ತು ಇವರ ನಾಯಕತ್ವದಿಂದ ಬಿಜೆಪಿ ಈ ಮಟ್ಟಕ್ಕೆ ಬೆಳೆಯಲು ಕಾರಣವಾಯಿತು ಎಂದು ಬಿಜೆಪಿ ತಾಲ್ಲೂಕು ಅಧ್ಯಕ್ಷ ಕೆ. ಲಕ್ಷ್ಮಣ್ ಹೇಳಿದರು.

ಬಿಜೆಪಿ ವತಿಯಿಂದ ಪಕ್ಷದ ಕಚೇರಿಯಲ್ಲಿ ಮಾಜಿ ಪ್ರಧಾನಿ, ಬಿಜೆಪಿ ಸಂಸ್ಥಾಪಕ ಅಟಲ್ ಬಿಹಾರಿ ವಾಜಪೇಯಿ ಅವರ 100 ವರ್ಷದ ಜನ್ಮದಿನಾಚರಣೆ ಸುಶಾಸನ ದಿನ ಎಂದು ಆಚರಣೆ ಅಂಗವಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಸೇರಿದಂತೆ ವಿವಿಧ ಆಸ್ಪತ್ರೆಗಳಿಗೆ ತೆರಳಿ ರೋಗಿಗಳಿಗೆ ಹಾಲು-ಹಣ್ಣು ವಿತರಿಸಿ ಅವರು ಮಾತನಾಡಿದರು.

ರಾಜ್ಯ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಜಿ. ನಂಜನಗೌಡ ಮಾತನಾಡಿ, ವಾಜಪೇಯಿ ಈ ದೇಶ ಕಂಡ ಅಪರೂಪದ ರಾಜಕಾರಣಿ ಅವರು 5 ವರ್ಷಗಳ ಕಾಲ ಈ ದೇಶವನ್ನು ಆಳಿದ ಕಾಂಗ್ರೆಸ್ಸೇತರ ಪೂರ್ಣಾವಧಿಯ ಅಧಿಕಾರ ಅನುಭವಿಸಿದ ಪ್ರಧಾನಿ ಎಂಬ ಹೆಗ್ಗಳಿಕೆ ಇವರದ್ದಾಗಿದೆ. ಉತ್ತಮ ಕವಿ, ವಾಗ್ಮಿ, ಸಾಹಿತಿ, ಶಾಂತಿ ಸುವ್ಯವಸ್ಥೆಯನ್ನು ಮೈಗೂಡಿಸಿಕೊಂಡು ರಾಷ್ಟ್ರ ರಾಜಕಾರಣದ ಉತ್ತಮ ಪಟು ಆಗಿದ್ದರು ಎಂದರು.

ಮಂಡಲದ ಪ್ರಧಾನ ಕಾರ್ಯದರ್ಶಿ ಎ. ಉದಯಕುಮಾರ್ ಮಾತನಾಡಿ, ವಾಜಪೇಯಿ ಅವರು ಬಾಲ್ಯದಲ್ಲಿ ಶಾಲಾ ಶಿಕ್ಷಕರ ಮಗನಾಗಿ ಬಡ ಕುಟುಂಬದಲ್ಲಿ ಹುಟ್ಟಿ ಪ್ರಧಾನಿ ಹುದ್ದೆಗೆ ಏರಿದವರು. ಇವರು ತಂದೆಯವರ ಆಸೆಯಂತೆ ವಕೀಲ ವೃತ್ತಿ ಇಚ್ಛೆ ಇದ್ದರೂ ವಾಜಪೇಯಿ ಅವರು ಸಮಾಜ ಸೇವೆಯ ರಾಜಕಾರಣದ ವೃತ್ತಿಗೆ ಧುಮುಕಿ ವಿಶ್ವ ಮೆಚ್ಚುವ ನಾಯಕರಾಗಿದ್ದರು ಎಂದರು. ಪೋಕ್ರನ್ ಅಣ್ವಸ್ತ್ರ ಪ್ರಯೋಗ ಕಾರ್ಗಿಲ್ ಯುದ್ಧ ರಾಷ್ಟ್ರೀಯ ಹೆದ್ದಾರಿ ಪ್ರಧಾನ ಮಂತ್ರಿ ಸಡಕ್ ಯೋಜನೆ ಸರ್ವ ಶಿಕ್ಷಣ ಅಭಿಯಾನ ಮುಂತಾದ ಯೋಜನೆಗಳನ್ನು ಜಾರಿಗೆ ತಂದರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷರಾದ ಸ್ವಪ್ನ ಮಲ್ಲಿಕಾರ್ಜುನ್, ಜಿಲ್ಲಾ ಎಸ್.ಸಿ. ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಣಿವೆಹಳ್ಳಿ ಮಂಜುನಾಥ್, ಮಂಡಲದ ಉಪಾಧ್ಯಕ್ಷ ಮುದುಕವ್ವ ನವರ ಶಂಕರ್, ಸಹಕಾರ ಸಮಿತಿ ರಾಜ್ಯ ಸದಸ್ಯ ಜೆ. ಓಂಕರೇಶ್ವರ ಗೌಡ, ಪ್ರಧಾನ ಕಾರ್ಯದರ್ಶಿ ಬಿ.ವೈ. ವೆಂಕಟೇಶ್ ನಾಯ್ಕ, ಮುಖಂಡರಾದ ಕೆ. ಮಂಜುಳಾ, ಬದ್ರಿ ನಾರಾಯಣ್, ಮಲ್ಲಿಕಾರ್ಜುನ್, ಮಟ್ಟಿ ನಾಗಾನಂದ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಆಫ್ಘಾನ್ ಶಂಕಿತ ಉಗ್ರರ ನೆಲೆಗಳ ಮೇಲೆ ಪಾಕ್ ದಾಳಿ : ಕನಿಷ್ಠ 13 ಸಾವು

ಪೇಶಾವರ, ಡಿ. 25- ಪಾಕಿಸ್ತಾನ ತನ್ನ ನೆರೆ ದೇಶವಾದ ಆಫ್ಘಾನಿಸ್ತಾನದ ಮೇಲೆ ಅಪರೂಪದ ವೈಮಾನಿಕ ದಾಳಿ ನಡೆಸಿದೆ. ಈ ದಾಳಿಯಲ್ಲಿ ಮಹಿಳೆಯರು ಹಾಗೂ ಮಕ್ಕಳು ಸಾವನ್ನಪ್ಪಿದ್ದಾರೆ ಎಂದು ಸ್ಥಳೀಯ ಆಫ್ಘನ್ನರು ಹಾಗೂ ಪಾಕಿಸ್ತಾನಿ ತಾಲಿಬಾನ್ ತಿಳಿಸಿದೆ.

ಆಫ್ಘಾನಿಸ್ತಾನದ ಗಡಿಯಲ್ಲಿರುವ ಪಟ್ಕಿಟಾ ಎಂಬಲ್ಲಿನ ಉಗ್ರ ತರಬೇತಿ ತಾಣದ ಮೇಲೆ ದಾಳಿ ನಡೆಸಲಾಗಿತ್ತು ಎಂದು ಪಾಕಿಸ್ತಾನದ ಭದ್ರತಾ ಅಧಿಕಾರಿಗಳು ಹೇಳಿದ್ದಾರೆ.

ದಾಳಿಯಲ್ಲಿ ಕನಿಷ್ಠ 13 ಜನ ಸಾವನ್ನಪ್ಪಿದ್ದಾರೆ, ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗಬಹುದು. ಗಾಯಗೊಂಡವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಆಫ್ಘಾನಿಸ್ತಾನದ ಸ್ಥಳೀಯರು ಹೇಳಿದ್ದಾರೆ.

ದಾಳಿಯಲ್ಲಿ 27 ಮಹಿಳೆಯರೂ ಹಾಗೂ ಮಕ್ಕಳು ಸೇರಿದಂತೆ 50 ಜನರು ಸಾವನ್ನಪ್ಪಿದ್ದಾರೆ ಎಂದು ಪಾಕಿಸ್ತಾನಿ ತಾಲಿಬಾನ್ ವಕ್ತಾರ ಮಹ್ಮದ್ ಖುರಾಸನಿ ಹೇಳಿದ್ದಾರೆ.

ದಕ್ಷಿಣ ವಾಜಿರಿಸ್ತಾನದ ಮೇಲೆ ನಡೆಸಿದ ದಾಳಿಯಲ್ಲಿ 13 ಉಗ್ರರನ್ನು ಹೊಡೆದುರುಳಿಸ ಲಾಗಿದೆ ಎಂದು ಪಾಕಿಸ್ತಾನದ ಸೈನ್ಯ ತಿಳಿಸಿದೆ.

ಇದರಿಂದಾಗಿ ಆಫ್ಘಾನಿಸ್ತಾನ ಹಾಗೂ ಪಾಕಿಸ್ತಾನದ ನಡುವಿನ ವೈಮನಸ್ಸು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಆಫ್ಘಾನಿಸ್ತಾನದ ಆಡಳಿತಾರೂಢ ತಾಲಿಬಾನ್ ಸರ್ಕಾರ ದಾಳಿಯನ್ನು ಖಂಡಿಸಿದೆ. ಮೃತರಲ್ಲಿ ಬಹುತೇಕರು ವಾಜಿರಿಸ್ತಾನದ ವಲಸಿಗರಾಗಿದ್ದಾರೆ. ಈ ದಾಳಿಗೆ ಪ್ರತೀಕಾರ ತೆಗೆದುಕೊಳ್ಳಲಾಗುವುದು ಎಂದು ತಾಲಿಬಾನ್ ಸರ್ಕಾರ ಹೇಳಿದೆ.

ಕಳೆದ ಮಾರ್ಚ್ ತಿಂಗಳಲ್ಲೂ ಆಫ್ಘಾನಿಸ್ತಾನದ ಗಡಿಯ ಒಳಗೆ ಪಾಕಿಸ್ತಾನ ದಾಳಿ ನಡೆಸಿತ್ತು.

ಪಾಕಿಸ್ತಾನ ಕಳೆದ ಎರಡು ದಶಕಗಳಿಂದಲೂ ಉಗ್ರವಾದಿ ದಾಳಿಯನ್ನು ಎದುರಿಸುತ್ತಿದೆ. ಆದರೆ ಇತ್ತೀಚಿನ ತಿಂಗಳಲ್ಲಿ ದಾಳಿಯ ಪ್ರಮಾಣಗಳು ಹೆಚ್ಚಾಗಿವೆ. ಕಳೆದ ವಾರ ಪಾಕಿಸ್ತಾನದ ಚೆಕ್‌ಪೋಸ್ಟ್ ಮೇಲೆ ನಡೆಸಿದ ದಾಳಿಯಲ್ಲಿ ಪಾಕಿಸ್ತಾನದ 16 ಸೈನಿಕರು ಸಾವನ್ನಪ್ಪಿದ್ದರು.

ತನ್ನ ಗಡಿಯೊಳಗೆ ನಡೆಯುತ್ತಿರುವ ಉಗ್ರವಾದಿ ಚಟುವಟಿಕೆಗಳ ಬಗ್ಗೆ ಆಫ್ಘಾನಿಸ್ತಾನ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಪಾಕಿಸ್ತಾನ ಆರೋಪಿಸಿದೆ. ಆದರೆ ಆಫ್ಘಾನಿಸ್ತಾನ ಈ ಆರೋಪವನ್ನು ತಳ್ಳಿ ಹಾಕಿದೆ.

## ನಿಟುವಳ್ಳಿಗೆ ಇಂದು ಪಾರಂಪರಿಕ ವೈದ್ಯರ ಭೇಟಿ

ನಿಟುವಳ್ಳಿ ಹೆಚ್.ಕೆ.ಆರ್. ಸರ್ಕಲ್ ಹತ್ತಿರದ ಪತಂಜಲಿ ವೆಲ್ನೆಸ್ ಸೆಂಟರ್‌ಗೆ ಇಂದು ಮಧ್ಯಾಹ್ನ 3 ಗಂಟೆಗೆ ಕುದೂರಿನ ಮೂಳೆ ತಜ್ಞರೂ, ಪಾರಂಪರಿಕ ವೈದ್ಯರೂ ಆದ ಮಹದೇವಯ್ಯ ಭೇಟಿ ನೀಡಲಿದ್ದಾರೆ. ಮಹಾದೇವಯ್ಯ ಅವರು ಮೂಳೆ ಮುರಿತ, ಟೆನಿಸ್ ಎಲ್ಬೋ, ಸೊಂಟ ನೋವು, ಕುತ್ತಿಗೆ ನೋವು, ಭುಜ ನೋವು ಸಮಸ್ಯೆಗಳಿಗೆ ಚಿಕಿತ್ಸೆ ನೀಡಲಿದ್ದಾರೆ ಎಂದು ಜಿಲ್ಲಾ ಸಂಚಾಲಕರಾದ ಕೆ.ಎಂ. ಪುಷ್ಪಲತಾ (8310748946, 9880107918) ತಿಳಿಸಿದ್ದಾರೆ.


**ಕಮರ್ಷಿಯಲ್ ಸೈಟು ಮಾರಾಟಕ್ಕಿದೆ**
ಹಳೇ ಪಿ.ಬಿ. ರಸ್ತೆ (ಅರುಣ ಟಾಕೀಸ್ ಹತ್ತಿರ) ದಕ್ಷಿಣ 50x150, GMIT College ಹತ್ತಿರ ಉತ್ತರ 85x260 ಮಾರಾಟಕ್ಕಿದೆ.
ಐಗೂರು ವಿಜಯಕುಮಾರ
99457 02495

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಬಡಾವಣೆ ಪೂರ್ವ+ದಕ್ಷಿಣ ಕಾರ್ನರ್ 50x50, ಬನಶಂಕರಿ ಬಡಾವಣೆ ಪೂರ್ವ 30x50 ಅಕ್ಕ-ಪಕ್ಕ, 40x60 ಅಕ್ಕ-ಪಕ್ಕ ಪಶ್ಚಿಮ 80, 70, 30x70, SS 'A' Block ದಕ್ಷಿಣ 30x50
ಐಗೂರು ವಿಜಯಕುಮಾರ
99457 02495

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ ನುರಿತ ಅನುಭವವುಳ್ಳ ANM ಮತ್ತು GNM ಆದವರು ಈ ಕೆಳಗಿನ ಮೊಬೈಲ್ ನಂಬರ್ ಗೆ ತಮ್ಮ ಬಯೋಡೇಟಾದೊಂದಿಗೆ ಸಂಪರ್ಕಿಸಿ.
98450 35710

**ಬೇಕಾಗಿದ್ದಾರೆ**
ಅಕೌಂಟೆಂಟ್ ಹುದ್ದೆಗೆ ಲೇಡೀಸ್ ಬೇಕಾಗಿದ್ದಾರೆ. ಕಲಿಯುವವರಿಗೂ ಆದ್ಯತೆಯುಂಟು. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ
91108 98377

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗ - ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡೀಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**ROOM FOR RENT**
Single Attached room with all facilities available with wardrobe and cots system at MCC 'A' Block, Near Ram Krishna Ashrama, Beside Ganesh temple.
97405 69252

**ನೇರ ಪರೀಕ್ಷೆ ಕಟ್ಟಲು ಅರ್ಜಿ ಆಹ್ವಾನ**
SSLC ನೇರ ಪರೀಕ್ಷೆ, ಶಾಲೆ ಬಿಟ್ಟಿದ್ದೀರಾ ?
7, 8, 9 ಪಾಸ್/ ಫೇಲ್ 10th ಫೇಲ್ /ಗೈರುಹಾಜರಿ (ಮಾನ್ಯತೆ ಪಡೆದ ಪರೀಕ್ಷಾ ಕೇಂದ್ರ) (ದಾವಣಗೆರೆ/ಹೂವಿನಹಡಗಲಿ) (ಉನ್ನತ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಕ್ಕೆ ಹಾಗೂ ಮುಂಬಡ್ತಿ ಪಡೆಯಲು ಉಪಯೋಗ)
2nd PUC/ Senior Secondary ARTS/ COMMERCE/SCIENCE
NTC/BA, B.Com., B.Sc., MA, M.Com, M.Sc, MBA
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿ.
HOLYFAITH CORRESPONDENCE COLLEGE
B1- ಹೊಸ ಆರ್‌ಟಿಒ ಆಫೀಸ್ ಎದುರು, ದಾವಣಗೆರೆ. B2 - ಜಜಮಾತಾ ಕಾಲೋನಿ, ಹರಿಹರ ದಾವಣಗೆರೆ.
7349397287, 9741746205

**ಮನೆ ಲೀಸ್‌ಗೆ ಇದೆ**
2BHK, 2nd Floor ಗಣೇಶ ಲೇಔಟ್ KSRTC Bustand ಹತ್ತಿರ, ದಾವಣಗೆರೆ.
ಮೊ. 98800 56262

**ಮನೆ ಬಾಡಿಗೆಗೆ ಇದೆ**
3 BHK ಡಬಲ್ ಡುಪ್ಲೆಕ್ಸ್, 20x20 ಉತ್ತರ, 40 ಅಡಿ. ಸೋಲಾರ್, ಬೋರ್‌ವೆಲ್ ಎಲ್ಲಾ ಕನ್ವಿನೆಂಟ್. ಸಿರಿ ನಿಲಯ, ದೇವರಾಜ್ ಅರಸ್ ಬಡಾವಣೆ, ಬಿ ಬ್ಲಾಕ್, ಡೋರ್ ನಂ. 276/2 only for rent.
98449 45322

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
ಸಿ.ಜಿ. ಆಸ್ಪತ್ರೆ ಹಿಂಭಾಗ
ಪೆವಿಲಿಯನ್ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ.
98450 35710, 77607 39990

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಬೇಕಾಗಿದ್ದಾರೆ**
PCMB Lecturers for KCET, NEET Coaching
ಸಮೃದ್ಧಿ ಅಕಾಡೆಮಿ, ದಾವಣಗೆರೆ.
96202 62361
81472 62361

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿರಿ :
94484 39639

**ಬಾಡಿಗೆಗೆ ಇದೆ**
ದಾವಣಗೆರೆಯ ಮಾರ್ಕೆಟ್‌ಗೆ ಹತ್ತಿರವಿದ್ದು, Transport Office, Nursing Home, Gowden, School or Collegeಗೆ ಸೂಕ್ತವಾಗಿರುವ ಸುಸಜ್ಜಿತ ಕಟ್ಟಡ ಹಾಗೂ ಪಾರ್ಕಿಂಗ್‌ಗೆ ಅನುಕೂಲವಿರುವ 7466 sq.feet ನಲ್ಲಿ ಕಟ್ಟಿರುವ 9 ಮಳಿಗೆಗಳು ಕೆ.ಆರ್. ರಸ್ತೆಯಲ್ಲಿ ಬಾಡಿಗೆಗೆ ಸಿಗುತ್ತವೆ.ಸಂಪರ್ಕಿಸಿ :
89718 20636
99002 80022

**ಬೇಕಾಗಿದ್ದಾರೆ**
ಶಾಮನೂರು ರಸ್ತೆಯಲ್ಲಿ MRP ಪಕ್ಕದಲ್ಲಿ ನಾನ್‌ವೆಜ್ ಹೋಟೆಲ್ ನಡೆಸಿಕೊಂಡು ಹೋಗಲು ಬೇಕಾಗಿದ್ದಾರೆ. ಎಲ್ಲಾ ಸೌಲಭ್ಯವುಳ್ಳದ್ದಾಗಿರುತ್ತದೆ.
ಆಸಕ್ತರು ಸಂಪರ್ಕಿಸಿ.
98861 66432

**ಅಡಿಕೆ ತೋಟ ಮಾರಾಟಕ್ಕಿದೆ**
ದಾವಣಗೆರೆಯಿಂದ 10 ಕಿ.ಮೀ. ಹತ್ತಿರವಿರುವ 5 ಎಕರೆ 2 ವರ್ಷದ ಅಡಿಕೆ ತೋಟ, 3 ಬೋರ್‌ವೆಲ್ ಮತ್ತು ಚಾನಲ್ ನೀರಿನ ವ್ಯವಸ್ಥೆಯಿದೆ. ಪ್ರತಿ ಎಕರೆಗೆ 50 ಲಕ್ಷ ರೂ. ಜೀನಿಯಸ್ ಸ್ಕೂಲ್ ಹತ್ತಿರ, ಹಿರೇತೊಗಲೇರಿ.
82172 37969, 97413 48103

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**FLAT FOR LEASE**
3 BHK, Sqft : 1888
AM Apartment
Nainika Prime Rose
Vidyanagar Last city bus stop Davangere.
89519 38228, 80502 22181

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಅಕೌಂಟೆಂಟ್/ Tally
ಅನುಭವವಿರುವವರು ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
89515 59474

**Required**
Lady candidate for Office work
Good English communication with computer knowledge
P J Extension, Davangere.
99006 66122

**ರಕ್ತ ದಾನ ಶ್ರೇಷ್ಠ ದಾನ**

**WANTED FACULTY**
Sushrutha Arogya Prathistana, Sushrutha Institute of Pharmacy
Davangere City
* M.Pharm - 2 * B.Pharm - 2
Office Accountant (B.Com., / M.com., with Computer Knowledge) -1
please send Resume to email/whatsapp No.
Contact :
9916067627, 7019051299

**WANTED**
* Marketing Executive
* Accountant
* godown Incharge
63620 23451, 97434 37003

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

**REQUIRED**
Accountant for Construction office
minimum 4 to 5 years experience in GST & Tally
8050222047, 8951938228

**ಮನೆಗಳು ಲೀಸ್‌ಗಿವೆ**
2BHK ಪೂರ್ವ ಬಾಗಿಲು 1 ಮತ್ತು 2ನೇ ಮಹಡಿ ಮನೆ, ಲೀಸ್ ಮೊತ್ತ 5.5 ಲಕ್ಷ, ದೇವರಾಜ ಅರಸ್ ಬಡಾವಣೆ 'ಎ' ಬ್ಲಾಕ್, 2ನೇ ಮೇನ್, 2ನೇ ಕ್ರಾಸ್, ದಾವಣಗೆರೆ. ಬೋರ್ ವೆಲ್/ಕಾರ್ಪೋರೇಷನ್ ನೀರಿನ ವ್ಯವಸ್ಥೆ ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ.
7349397287, 9741746205

**2BHK ಮನೆ ಬಾಡಿಗೆಗಿದೆ**
ಆಂಜನೇಯ ಬಡಾವಣೆ, 17ನೇ ಕ್ರಾಸ್, # 4391/3, ದಶರಥ ರಾಮೇಶ್ವರ ನಿಲಯ, 1ನೇ ಮಹಡಿ, ನೂತನ - ಸಿದ್ದೇಶ್ವರ ಕಾಲೇಜ್ ಹತ್ತಿರ, (ಸಸ್ಯಹಾರಿಗೆ ಮಾತ್ರ)
ಜೆ.ಬಿ. ರಾಜಪ್ಪ
94816 88641

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ನಮ್ಮ ಕಾಫೀ ಶಾಪ್‌ನಲ್ಲಿ ಮತ್ತು ಕಾಫೀ ಕೌಂಟರ್‌ಗಳಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಆಸಕ್ತಿವುಳ್ಳವರು ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**Urgent Requirement**
Tele Calling and Marketing (Male / Female)
Qualification : 10th/12th (Pass/fail)
Interview time : 10 to 5
93534 85785, 63600 84872

**ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ**
ಟೆಲಿಕಾಲಿಂಗ್ ಮತ್ತು ಅಕೌಂಟೆಂಟ್ ಬೇಕಾಗಿದ್ದಾರೆ. ಸಂಪರ್ಕಿಸಿ :
72046 17344

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಆಕರ್ಷಕ ಸಂಬಳ ನೀಡಲಾಗುವುದು.
ಸಂಪರ್ಕಿಸಿ :
94496 43555

**Office Rooms for Hire**
Two rooms for offices at prime location for hire at 1st floor, RMC Rice Market main road.
Size : 10x22 and 10x33
90352 40400

**ಬೇಕಾಗಿದ್ದಾರೆ**
ಪೈಪ್ ಡಿಸ್ಟ್ರಿಬ್ಯೂಷನ್‌ನಲ್ಲಿ ಫೀಲ್ಡ್ ವರ್ಕ್ ಮಾಡಲು ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ.
ಎಪಿಎಂಸಿ ಯಾರ್ಡ್, ದಾವಣಗೆರೆ.
70196 73906

# ಪುಷ್ಕರಣಿ ನಾಡಿನಲ್ಲಿ ಜನವರಿ 8 ಕ್ಕೆ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ



ಸಂತೇಬೆನ್ನೂರು, ಡಿ. 25- ಐತಿಹಾಸಿಕ ಪುಷ್ಕರಣಿ ನಾಡಿನಲ್ಲಿ ತಾಲ್ಲೂಕಿನ 17ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಂತೇಬೆನ್ನೂರಿನ ಎಸ್ ಎಸ್ ಜೆವಿಪಿ ಕರ್ನಾಟಕ ಪಬ್ಲಿಕ್ ಶಾಲೆಯ ಆವರಣದಲ್ಲಿ ಆಚರಿಸಲು ನಿನ್ನೆ ನಡೆದ ಪೂರ್ವಭಾವಿ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಲಾಯಿತು.

ಬರುವ ಜನವರಿ 8 ಕ್ಕೆ ಕನ್ನಡ ಸಾಹಿತ್ಯ ಸಮ್ಮೇಳನದ ನಡೆಯಲಿದೆ ಎಂದು ಶಾಸಕ ಬಸವರಾಜು ವಿ.ಶಿವಗಂಗಾ ಘೋಷಿಸಿದರು. ತಾಲ್ಲೂಕು ಕಸಾಪ ಅಧ್ಯಕ್ಷ ಎಲ್.ಜಿ.ಮಧು ಕುಮಾರ್ ಕಾರ್ಯಕಾರಿ ಸಮಿತಿ ತೀರ್ಮಾನದಂತೆ ಹಿರಿಯ ಕನ್ನಡ ಪರಿಚಾರಕ ಸಂತೇಬೆನ್ನೂರು ಕೆ. ಸಿದ್ದಲಿಂಗಪ್ಪ ಅವರು ಸರ್ವಾಧ್ಯಕ್ಷರಾಗಿರುತ್ತಾರೆ ಎಂದು ತಿಳಿಸಿಸಿದರು.

ಜನವರಿ 8 ರಂದು ಬೆಳಿಗ್ಗೆ 9 ಗಂಟೆಗೆ ಪುಷ್ಕರಣಿಯಿಂದ ಸಾರೋಟಿನಲ್ಲಿ ಸರ್ವಾಧ್ಯಕ್ಷರ ಮೆರವಣಿಗೆ ನೆರವೇರಲಿದೆ. ರಸ್ತೆಯುದ್ದಕ್ಕೂ ವಿವಿಧ ಕಲಾ ತಂಡಗಳು, ಶಾಲಾ ಮಕ್ಕಳ ಪಥ ಸಂಚಲನ ನಡೆಯಲಿದೆ. ಬೆಳಿಗ್ಗೆ 11 ಕ್ಕೆ ಉದ್ಘಾಟನೆ ನೆರವೇರಲಿದೆ. ವಿಚಾರ ಗೋಷ್ಠಿ, ಕವಿ ಗೋಷ್ಠಿ, ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಗ್ರಾ.ಪಂ. ಅಧ್ಯಕ್ಷರಾದ ರೇಣುಕಮ್ಮ, ಉಪಾಧ್ಯಕ್ಷರಾದ ಮೀನಾಕ್ಷಿ, ಸದಸ್ಯರಾದ ರಹಮತ್ ಉಲ್ಲಾ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ಸಿದ್ದಪ್ಪ, ವರ್ತಕ ಸಂಘದ ಅಧ್ಯಕ್ಷ ಕೆ.ಸಿರಾಜ್ ಅಹಮದ್, ಜಿಲ್ಲಾ ಕಸಾಪ ಸಹಕಾರ್ಯದರ್ಶಿ ಕೆ. ಎಸ್.ವೀರೇಶ್ ಪ್ರಸಾದ್, ವಿಎಸ್ ಎಸ್ಎನ್ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ, ಕೆ.ಬಸವರಾಜ್, ರುದ್ರಪ್ಪ, ಸಂತೋಷ್, ಬ್ಯಾಟಪ್ಪ, ನಯಾಜ್, ಎಂ.ಬಿ.ನಾಗರಾಜ್, ಮಾರುತಿ, ಪಿ.ರುದ್ರೇಶ್, ಸ್ವಾಮಿ ಗೌಡ್ರು, ಜಿ.ಎನ್.ಸುರೇಶ್, ಸಂತೋಷ್, ಕೆ.ಪಿ.ಗಿರೀಶ್, ಮಂಜು, ಕಿರಣ್ ಇದ್ದರು.

# ಅನ್ನದಾನದಲ್ಲಿ ಪ್ರೀತಿಯ ಪರಿಮಳ ಇರಲಿ : ವೀರೇಂದ್ರ ಹೆಗ್ಗಡೆ

ದಾವಣಗೆರೆ, ಡಿ. 25 - ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಅನ್ನದಾನ, ವಿದ್ಯಾದಾನ, ಔಷಧಿ ದಾನ ಮತ್ತು ಅಭಯ ದಾನಗಳಿದ್ದು, ಇವುಗಳಲ್ಲಿ ಅನ್ನ ದಾನ ಅತ್ಯಂತ ಶ್ರೇಷ್ಠ ದಾನವಾಗಿದೆ. ಈ ದಾನ ನಮಗೆ ಸಂತೃಪ್ತಿ ತಂದಿದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ರಾಜ್ಯಸಭಾ ಸದಸ್ಯರಾದ ಡಾ. ವೀರೇಂದ್ರ ಹೆಗ್ಗಡೆ ಹೇಳಿದರು.

ನಗರದ ಅಜ್ಜಂಪುರ ಶೆಟ್ರು ಕಾಂಪೌಂಡ್ ಆವರಣದಲ್ಲಿ ಶ್ರೀಮತಿ ಲತಾ ಮತ್ತು ಅಣಬೇರು ಮಂಜಣ್ಣ ಕುಟುಂಬದವರು ಇಂದು ಹಮ್ಮಿಕೊಂಡಿದ್ದ 25ನೇ ವರ್ಷದ ಅಕ್ಕಿ ಸಮರ್ಪಣೆ ಮತ್ತು ಶ್ರೀ ಮಂಜುನಾಥ ಸ್ವಾಮಿ ಪೂಜಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅನ್ನದಾನದ ಮಹತ್ವ ಕಂಡುಕೊಂಡ ನಾವು ಶ್ರೀಕ್ಷೇತ್ರದಲ್ಲಿ ಹೆಚ್ಚಿನ ಒತ್ತು ನಿಡುತ್ತಾ ಬಂದಿದ್ದೇವೆ. ಮನುಷ್ಯನಿಗೆ ಬಟ್ಟೆ, ಚಿನ್ನ ಇಲ್ಲದಿದ್ದರೂ ಬದುಕುತ್ತಾನೆ. ಆದರೆ ಅನ್ನವಿಲ್ಲದಿದ್ದರೆ ಬದುಕಲು ಸಾಧ್ಯವಿಲ್ಲ ಎಂದರು. ಇತ್ತೀಚೆಗೆ ಅನ್ನದಾನವು ಎಲ್ಲಾ ಪುಣ್ಯ ಕ್ಷೇತ್ರಗಳಲ್ಲಿ ನಡೆಸುತ್ತಿರುವುದು ಸಂತಸ ತಂದಿದೆ. ತಿರುಪತಿಯಲ್ಲಿ ಅನ್ನಛತ್ರ ಪ್ರಾರಂಭಿಸುವುದಕ್ಕಿಂತ ಮುಂಚೆ ಧರ್ಮಸ್ಥಳಕ್ಕೆ ಆಗಮಿಸಿ ಮಾಹಿತಿ ಕೇಳಿದ್ದರು. ನಂತರ ನಾವು ತಿರುಪತಿಯಲ್ಲಿ ಅನ್ನ ಸಂತರ್ಪಣೆಗಾಗಿ ಪಾತ್ರೆ, ಅಕ್ಕಿ ನೀಡಿದ್ದೇವೆಂದು ಸ್ಮರಿಸಿಕೊಂಡರು.



ಅನ್ನದಾನದಲ್ಲಿ ಪ್ರೀತಿಯ ಪರಿಮಳ ಇರಬೇಕು. ದಾನ ದೊಡ್ಡದಾಗಿರಬೇಕೆಂದೇನಿಲ್ಲ, ನೀವು ಪ್ರೀತಿಯಿಂದ ಮಾಡುವ ಸಣ್ಣ ದಾನವು ಮಹಾದಾನವಾಗಿರುತ್ತದೆ. ದಾಸೋಹ ಎಂದರೆ ಎಲ್ಲರಿಗೂ ಕೊಡುವಂತಹದ್ದು ಎಂದು ಹೆಗಡೆ ಅವರು ತಿಳಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳದ ಅನ್ನ ದಾಸೋಹ ಮತ್ತು ಸಾಮಾಜಿಕ ಸೇವೆಗಳು ದೇಶಕ್ಕೆ ಮಾದರಿಯಾಗಿವೆ ಎಂದರು.

ಮಾಯಾಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಿಇಓ ಅನಿಲ್ ಕುಮಾರ್, ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಹೊನ್ನಾಳಿ ಬಾಬಣ್ಣ, ಕೋಶಾಧಿಕಾರಿ ಎಸ್.ಟಿ. ಕುಸುಮ ಶೆಟ್ರು, ಸದಸ್ಯರಾದ ಸುರೇಶ್ ಹೊಸಕೆರೆ, ಜಿ. ಮಂಜುನಾಥ ಪಟೇಲ್, ಅಣಜಿ ಚಂದ್ರಶೇಖರ್, ಪದ್ಮರಾಜ ಜೈನ್, ರಾಜಶೇಖರ್ ಕೊಂಡಜ್ಜಿ, ಬೆಳ್ಳೂಡಿ ರವಿಶಂಕರ್, ಶುಭ, ಅನಿತಾ, ಜಯಮ್ಮ ಚೇತನ, ಕೆ.ಜಿ. ಮಹೇಶ್ವರಪ್ಪ, ಕುಮಾರಸ್ವಾಮಿ, ಜಿಗಳಿ ಪ್ರಕಾಶ್, ಹನುಮಂತರಾಯ, ಯೋಜನೆಯ ಪ್ರಾದೇಶಿಕ ನಿರ್ದೇಶಕಿ ಶ್ರೀಮತಿ ಗೀತಾ, ಯೋಜನೆಯ ಜಿಲ್ಲಾ ನಿರ್ದೇಶಕ ಲಕ್ಷ್ಮಣ್, ಅಜ್ಜಂಪುರ ಶೆಟ್ರು ಮೃತ್ಯುಂಜಯ ಸೇರಿದಂತೆ ಅನೇಕರು ಭಾಗವಹಿದ್ದರು.

ಜಿಲ್ಲಾ ಜನಜಾಗೃತಿ ವೇದಿಕೆ ಮಾಜಿ ಅಧ್ಯಕ್ಷ ಎಂ.ಬಿ. ನಾಗರಾಜ ಕಾಕನೂರು ಸ್ವಾಗತಿಸಿದರು. ಯೋಜನಾಧಿಕಾರಿ ಶ್ರೀಮತಿ ನಂದಿನಿ ನಿರೂಪಿಸಿದರು. ಅಣಬೇರು ಮಂಜಣ್ಣ ವಂದಿಸಿದರು.

ಧರ್ಮಸ್ಥಳಕ್ಕೆ 250 ಕ್ವಿಂಟಾಲ್ ಅಕ್ಕಿ ಚೀಲ ತುಂಬಿದ ಲಾರಿಗೆ ಡಾ. ವೀರೇಂದ್ರ ಹೆಗ್ಗಡೆಯವರು ಪೂಜೆ ಸಲ್ಲಿಸಿದರು.

# ಬೆಳಗಾವಿಯ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದಲ್ಲಿ ಭಾಗವಹಿಸಲು ಕರೆ

ದಾವಣಗೆರೆ, ಡಿ.25- ಮಹಾತ್ಮ ಗಾಂಧೀಜಿ ಅಧ್ಯಕ್ಷತೆಯಲ್ಲಿ 26 ಡಿಸೆಂಬರ್ 1924ರಂದು ಬೆಳಗಾವಿಯ ಕಾಂಗ್ರೆಸ್ ಅಧಿವೇಶನ ನಡೆದು, 100 ವರ್ಷ ಪೂರೈಸಿದ ಸವಿನೆನಪಿಗಾಗಿ ನಾಡಿದ್ದು ದಿನಾಂಕ 27 ರ ಶುಕ್ರವಾರ ಬೆಳಗಾವಿಯಲ್ಲಿ ನಡೆಯುವ ಕಾಂಗ್ರೆಸ್ ಶತಮಾನೋತ್ಸವ ಅಧಿವೇಶನದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಉಪಾಧ್ಯಕ್ಷರು, ಜಿಲ್ಲಾ ಸದಸ್ಯರು ಮತ್ತು ತಾಲ್ಲೂಕು ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಭಾಗವಹಿಸುವಂತೆ ಗ್ಯಾರಂಟಿ ಯೋಜನೆಗಳು ಅನುಷ್ಠಾನ ಪ್ರಾಧಿಕಾರ ರಾಜ್ಯಾಧ್ಯಕ್ಷ ಎಚ್.ಎಂ.ರೇವಣ್ಣ, ಉಪಾಧ್ಯಕ್ಷ ಸೂರಜ್ ಎಂ.ಎನ್. ಹೆಗಡೆ ಹಾಗೂ ಜಿಲ್ಲಾಧ್ಯಕ್ಷ ಶಾಮನೂರು ಟಿ. ಬಸವರಾಜ್ ಕೋರಿದ್ದಾರೆ.

# ನಗರದಲ್ಲಿ ಇಂದು ವಿನಾಯಕ ಸ್ವಾಮಿ ಕಾರ್ತಿಕೋತ್ಸವ

ದೊಡ್ಡಪೇಟೆಯ ವಿನಾಯಕ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಇಂದು ರಾತ್ರಿ 9.30ಕ್ಕೆ ವಿನಾಯಕ ಸ್ವಾಮಿಯ ಕಡೇ ಕಾರ್ತಿಕ ಮಹೋತ್ಸವ ನಡೆಯಲಿದೆ.

# ನಗರದಲ್ಲಿ ಇಂದಿನಿಂದ 3 ದಿನ ಸೇಂಟ್ ಜಾನ್ಸ್ ಉತ್ಸವ

ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯ 34ನೇ ವರ್ಷದ ವಾರ್ಷಿಕೋತ್ಸವ ಸೇಂಟ್ ಜಾನ್ಸ್ ಉತ್ಸವ ಕಾರ್ಯಕ್ರಮವು ಇಂದು ಮತ್ತು ನಾಳೆ ನಡೆಯಲಿದೆ.

ಇಂದು ಸಂಜೆ 5 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಚಿತ್ರದುರ್ಗ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಬಿ. ಆನಂದ್, ಆರ್. ಎಸ್. ಶೇಖರಪ್ಪ, ಹೆಚ್.ಬಿ. ರಾಮಚಂದ್ರಪ್ಪ ಉಪಸ್ಥಿತರಿರುವರು. ಹೆಚ್. ಅನಿಲ್‌ಕುಮಾರ್, ಆರ್.ಎಸ್. ರಾಕೇಶ್, ಟಿ.ಎಂ. ಉಮಾಪತಯ್ಯ, ಪ್ರವೀಣ್ ಹುಲ್ಲುಮನೆ, ಟಿ.ಎಂ.ಗಿರೀಶ್, ಆರ್.ಹೆಚ್. ನಾಗಭೂಷಣ್ ಮತ್ತು ಶ್ರೀನಾಥ್ ರೆಡ್ಡಿ ಉಪಸ್ಥಿತರಿರುವರು.

# ಹರಪನಹಳ್ಳಿ : ಕನಕ ಜಯಂತ್ಯೋತ್ಸವ ಯಶಸ್ಸಿಗೆ ಕರೆ

ಹರಪನಹಳ್ಳಿ,ಡಿ.25. ದಾವಣಗೆರೆಯಲ್ಲಿ ಜನವರಿ 5 ರಂದು ನಡೆಯಲಿರುವ ಭಕ್ತ ಕನಕ ದಾಸರ 537ನೇ ಜಯಂತ್ಯೋತ್ಸವ ಕಾರ್ಯಕ್ರಮ ಮತ್ತು ಸಮಾವೇಶ ಯಶಸ್ವಿಗೊಳಿಸುವಂತೆ ಕುರುಬ ಸಮಾಜದ ಮುಖಂಡರು ಕರೆ ನೀಡಿದರು.

ತಾಲ್ಲೂಕಿನಾದ್ಯಂತ ಪ್ರವಾಸ ಕೈಗೊಂಡು ಸಮಾಜದ ಬಂಧುಗಳನ್ನು ಆಹ್ವಾನಿಸಲಾಗಿದೆ. ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೇರಿದಂತೆ ವಿವಿಧ ಗಣ್ಯರುಗಳು ಭಾಗವಹಿಸಲಿದ್ದಾರೆ. ಶೋಷಿತ ಸಮುದಾಯಗಳ ಜನಜಾಗೃತಿ ಸಮಾವೇಶ ಜರುಗಲಿದೆ ಎಂದು ಹೇಳಿದರು.



ಈ ಸಂದರ್ಭದಲ್ಲಿ ಕುರುಬ ಸಮಾಜದ ಅಧ್ಯಕ್ಷ ಬಂಡ್ರಿ ಗೋಣೆಬಸಪ್ಪ ಗೌರವಾಧ್ಯಕ್ಷ ಬಸವರಾಜಪ್ಪ ಉದ್ಘಟ್ಟಿ ಸಿದ್ದಪ್ಪ, ಪುರಸಭೆ ಸದಸ್ಯ ಗಣೇಶ್ ಪೈಲ್ವಾನ್, ಮುಖಂಡರಾದ ಎಚ್. ವಸಂತಪ್ಪ, ಪರಶುರಾಮ್, ಹಾಲೇಕಲ್ಲು ಎಸ್.ಟಿ ಅರವಿಂದ್, ಜಯಣ್ಣ, ಶಿವಣ್ಣ ಮಾಸ್ತರ್, ಇಟ್ಟಿಗುಡಿ ಮಂಜುನಾಥ್, ಪ್ರಕಾಶ್ ಎಚ್. ಎನ್, ವೈ. ಮಂಜುನಾಥ್, ವೀರೇಶ್, ಲಿಂಗರಾಜ್, ಬಿ, ಶಿವಪುತ್ರ ಸೇರಿದಂತೆ ಇತರರು ಇದ್ದರು.

# ಜನಸಾಮಾನ್ಯರ ಬಗ್ಗೆ ಕಾಳಜಿ ಇಲ್ಲದ ಸರ್ಕಾರ



ದಾವಣಗೆರೆ, ಡಿ.25- ಸರ್ಕಾರವು ಸಾಮಾನ್ಯ ಜನರ ಬಗ್ಗೆ ಎಳ್ಳಷ್ಟೂ ಕಾಳಜಿ ಇಲ್ಲದಂತೆ ವರ್ತಿಸುತ್ತಿದೆ ಎಂದು ಸಮಾಜದ ಹಿರಿಯ ಮುಖಂಡ ಜೆ. ಸೋಮನಾಥ್ ದೂರಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದಲ್ಲಿ ಪ್ರಸ್ತುತ ನಡೆಯುತ್ತಿರುವ ರಾಜಕೀಯ ದೊಂಬರಾಟವನ್ನು ನೋಡಿದರೆ, ಬರೀ ಸ್ವಾರ್ಥ ಸಾಧನೆಗಳೇ ಕಾಣುತ್ತಿವೆ. ಜನರು ನಿಮ್ಮ ಮೇಲೆ ನಂಬಿಕೆ ಇಟ್ಟು ಅಧಿಕಾರ ನೀಡಿದ್ದಾರೆ ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕು, ಅದು ಬಿಟ್ಟು ಬರೀ ದ್ವೇಷ ಮತ್ತು ಸ್ವಾರ್ಥ ರಾಜಕಾರಣಕ್ಕೆ ಮುಂದಾದರೆ ಜನರೇ ತಕ್ಕ ಪಾಠ ಕಲಿಸಲಿದ್ದಾರೆ ಎಂಬುದನ್ನು ಮರೆಯಬಾರದು ಎಂದು ಸೋಮನಾಥ್ ಎಚ್ಚರಿಸಿದ್ದಾರೆ.

# ಲಯನ್ಸ್‌ನಿಂದ ಕ್ರಿಸ್‌ಮಸ್ ಆಚರಣೆ



ದಾವಣಗೆರೆ, ಡಿ. 25 - ನಗರದ ಲಯನ್ಸ್ ಕ್ಲಬ್ ವತಿಯಿಂದ ಪಿ.ಜೆ. ಬಡಾವಣೆಯ ಚರ್ಚ್‌ನಲ್ಲಿ ಏರ್ಪಡಿಸಿದ್ದ ಕ್ರಿಸ್‌ಮಸ್ ಕಾರ್ಯಕ್ರಮದಲ್ಲಿ ಫಾದರ್ ಆಂಟೋನಿ ಅವರಿಗೆ ಸಿಹಿ ನೀಡಿ ಸಮಸ್ತ ಕ್ರೈಸ್ತ ಬಾಂಧವರಿಗೆ ಕ್ರಿಸ್‌ಮಸ್ ಹಬ್ಬದ ಶುಭಾಶಯ ಸಲ್ಲಿಸಲಾಯಿತು. ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ. ಉಳುವಯ್ಯ, ಮಹಾಪೌರರಾದ ಕೆ. ಚಮನ್ ಸಾಬ್, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಶೀಘ್ರದಲ್ಲೇ ಸಂಪಾದಕರ ಸಂಘದ ರಾಜ್ಯ ಸಮ್ಮೇಳನ

ದಾವಣಗೆರೆ, ಡಿ.25- ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ವತಿಯಿಂದ ಬರುವ ಜನವರಿ ತಿಂಗಳ ಕೊನೆ ವಾರದಲ್ಲಿ ರಾಜ್ಯಮಟ್ಟದ 'ಪ್ರಪ್ರಥಮ ಸಮ್ಮೇಳನ' ಹಮ್ಮಿಕೊಳ್ಳಲಿದ್ದೇವೆ ಎಂದು ಸಂಘದ ರಾಜ್ಯಾಧ್ಯಕ್ಷ ಎ.ಸಿ. ತಿಪ್ಪೇಸ್ವಾಮಿ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನವನ್ನು ಗದಗ ನಗರದಲ್ಲಿ ಹಮ್ಮಿಕೊಳ್ಳುವ ತೀರ್ಮಾನ ಮಾಡಲಾಗಿದ್ದು, ಕಾನೂನು ಸಚಿವ ಹೆಚ್.ಕೆ. ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ನಡೆಯಲಿದೆ ಎಂದು ಹೇಳಿದರು.

ವಾರ್ತಾ ಇಲಾಖೆ ಮಾನ್ಯತೆ ಹೊಂದಿದ ಜಾಹೀರಾತು ಸಂಸ್ಥೆಗಳ ಮೂಲಕ ಬಿಡುಗಡೆ ಮಾಡುವ ಜಾಹೀರಾತುಗಳು, ಟೆಂಡರ್ ಹಾಗೂ ವರ್ಗೀಕೃತ ಜಾಹೀರಾತುಗಳ ಒಟ್ಟು ಬಿಲ್ಲಿನ ಮೊತ್ತದಲ್ಲಿ ಶೇ.15ರಷ್ಟು ಕಮೀಷನ್ ಕಡಿತಗೊಳಿಸುವುದು ಕಾನೂನು ಬಾಹಿರ ವಾಗಿದೆ. ಈ ಕುರಿತು ಸಂಬಂಧಿಸಿದ ಅಧಿಕಾರಿಗಳು ಹಾಗೂ ಸಿಎಂ ಬಳಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಎಂದು ದೂರಿದರು.

2023ರ ಎಪ್ರಿಲ್ 1ರಿಂದ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ನಿಯಮಾನುಸಾರ ಹಾಲಿ ಜಾಹಿರಾತು ದರಕ್ಕೆ ಶೇ.12ರಷ್ಟು ದರ ಹೆಚ್ಚಿಸಬೇಕು. ಏಜೆನ್ಸಿಗಳು ಕಡಿತಗೊಳಿಸುತ್ತಿರುವ ಕಮಿಷನ್ ಹಣ ತಕ್ಷಣಕ್ಕೆ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಐದು ವರ್ಷದೊಳಗಿನ ಒಬಿಸಿ, ಬ್ರಾಹ್ಮಣ ಸಮುದಾಯದ ಪತ್ರಿಕೆಗಳ ಏಳಿಗೆಗೆ ಸಹಕಾರ ನೀಡುವ ಹಿತದೃಷ್ಟಿಯಿಂದ ಸರ್ಕಾರ ಪ್ರೋತ್ಸಾಹ ರೂಪದ ಮಾಸಿಕ 1 ಪುಟದ ಜಾಹೀರಾತನ್ನು ವಾರ್ತಾ ಇಲಾಖೆಯಿಂದ ಬಿಡುಗಡೆ ಮಾಡುವುದಕ್ಕೆ ಸರ್ಕಾರ ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದರು. ಈ ವೇಳೆ ಬಿ. ವಾಸುದೇವ, ಕೆ.ಜೈಮುನಿ, ಸುರೇಶ್ ಆರ್. ಕುಣೇಬೆಳಕೆರೆ, ಗೋವರ್ಧನ ಗಿರಿಶ್ಯಾಮ್, ಕೆ.ಆರ್. ಗಂಗರಾಜು, ಶಿವಮೂರ್ತಿ ಇತರರು ಇದ್ದರು.

# ನಗರದಲ್ಲಿ ಇಂದು ಲಲಿತಾ ಉತ್ಸವ

ಲಲಿತಾ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆ, ಲಲಿತಾ ಪದವಿ ಪೂರ್ವ ಕಾಲೇಜು, ಲಲಿತಾ ಸ್ಮಾರ್ಟ್ ಕಿಡ್ಸ್ ಶಾಲೆಯಲ್ಲಿ ಲಲಿತಾ ಉತ್ಸವ ಏರ್ಪಾಡಾಗಿದ್ದು, ಪ್ರಶಸ್ತಿ ಪ್ರದಾನ ಸಮಾರಂಭವು ಇಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ಭಾರತೀಯ ವಾಯು ಸೇನೆಯ ಸತ್ಯ ಪ್ರಕಾಶ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸುವರು.

# ಸರ್ಕಾರದ ಆರೋಗ್ಯಕರ ಮನಸ್ಥಿತಿಯನ್ನು ಸೂಚಿಸುವ ಗಾಂಧಿ ತತ್ತ್ವಗಳ ಪುನರ್‌ಪ್ರತಿಷ್ಠಾನೆ ಕಾರ್ಯಕ್ರಮ

**ಮಾನ್ಯರೇ,**

ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ 1924ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಅಂಗವಾಗಿ 'ಗಾಂಧಿ ಭಾರತ' ಕಾರ್ಯಕ್ರಮ ಆಯೋಜನೆ ಬಗ್ಗೆ ಕರ್ನಾಟಕ ಸಚಿವ ಸಂಪುಟವು ದಿನಾಂಕ 6-12-24 ರಂದು ಅನುಮೋದನೆ ನೀಡಿ ಆರ್ಥಿಕ ಇಲಾಖೆಗೆ ಆದೇಶ ನೀಡಿರುವುದು ಸರಿಯಷ್ಟೆ.

ರಾಷ್ಟ್ರಪಿತ ಮಹಾತ್ಮಗಾಧೀಜಿಯವರ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಕೊಡುಗೆಯನ್ನು ಸ್ಮರಿಸಲು ಕರ್ನಾಟಕ ಸರ್ಕಾರವು 2 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲು ಮುಂದಾಗಿರುವುದು ಮತ್ತು 'ಗಾಂಧಿ ಭಾರತ' ಕಾರ್ಯಕ್ರಮಗಳನ್ನು 25 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಆಯೋಜಿಸಲು ಅನುಮೋದನೆ ನೀಡಿರುವುದು ಅತ್ಯಂತ ಶ್ಲಾಘನೀಯ ಸಂಗತಿ. ಜಗತ್ತಿನ ಇತರೆಲ್ಲ ದೇಶಗಳು ಗಾಂಧೀಜಿಯವರ ಅಹಿಂಸೆ, ಸಮಾನತೆ, ಸೌಹಾರ್ದತೆಯ ಸಂದೇಶವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಅದನ್ನು ಆದರ್ಶವಾಗಿಟ್ಟುಕೊಂಡಿರುವಾಗ ನಮ್ಮ ದೇಶದಲ್ಲೇ ಗಾಂಧೀಜಿಯವರನ್ನು ಅಂಚಿಗೆ ತಳ್ಳುವ, ಅಪಪ್ರಚಾರ ಮಾಡುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ. ಗಾಂಧಿ ತತ್ತ್ವದ ಸರ್ವಧರ್ಮ ಸಮನ್ವಯವನ್ನು ಕದಡಿ ಕೋಮುಶಕ್ತಿಗಳನ್ನು ಪೋಷಿಸುವ ಮನಸ್ಥಿತಿಯನ್ನು ವ್ಯವಸ್ಥಿತವಾಗಿ ಪ್ರಚಾರ ಮಾಡುತ್ತಿರುವ ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು 'ಗಾಂಧಿ ಭಾರತ' ಕಾರ್ಯಕ್ರಮವನ್ನು ಹಮ್ಮಿಕೊಂಡು ಕಳೆದುಕೊಂಡಿರುವ ಗಾಂಧಿ ತತ್ತ್ವಗಳ ಪುನರ್‌ಪ್ರತಿಷ್ಠಾನೆಗೆ ಕಾರ್ಯಕ್ರಮ ರೂಪಿಸಿರುವುದು ನಮ್ಮ ಸರ್ಕಾರದ ಆರೋಗ್ಯಕರ ಮನಸ್ಥಿತಿಯನ್ನು ಸೂಚಿಸುತ್ತದೆ.

'ಗಾಂಧಿ ಭಾರತ' ಕಾರ್ಯಕ್ರಮವು ಗಾಂಧಿ ತತ್ತ್ವಗಳಿಗೆ ಅನುಗುಣವಾಗಿ ನಡೆಯುವ ಮೂಲಕ, ನಿಜವಾದ ಗಾಂಧಿ ಆದರ್ಶಗಳನ್ನು ಎತ್ತಿ ಹಿಡಿಯುತ್ತ ಯಶಸ್ವಿಯಾಗಿಸಬೇಕೆಂಬುದು ಗಾಂಧಿ ಆದರ್ಶಗಳನ್ನು ಅನುಷ್ಠಾನಕ್ಕೆ ತರಲು ಶ್ರಮಿಸುತ್ತಿರುವ ನಮ್ಮ 'ಸರ್ವೋದಯ ಕರ್ನಾಟಕ' ಸಂಘಟನೆಯ ಎಲ್ಲ ಸದಸ್ಯರ ಸಲಹೆ. 'ಸರ್ವೋದಯ ಕರ್ನಾಟಕವು' ಸಾಂಸ್ಕೃತಿಕ ಕಾಳಜಿಯುಳ್ಳ ಅನೇಕ ಸಮಾಜ ಸೇವಾ ಕಾರ್ಯಗಳಲ್ಲಿ ನಿರತರಾಗಿರುವ ಸಮಾನ ಮನಸ್ಕರ ಗುಂಪು, ಗಾಂಧಿ ಆದರ್ಶಗಳಲ್ಲಿ ನಂಬಿಕೆಯಿರುವ ಧಾರ್ಮಿಕ ಸಂಸ್ಥೆಗಳ ಮಠಾಧಿಪತಿಗಳೂ ಸಹ ಈ ಸಮಾನಮನಸ್ಕರ ತಂಡದಲ್ಲಿದ್ದಾರೆ.

'ಗಾಂಧಿ ಭಾರತ' ಕಾರ್ಯಕ್ರಮಗಳಾದ ಗಾಂಧೀ ಲಾಂಛನವನ್ನು ಕಡ್ಡಾಯವಾಗಿ ಅಳವಡಿಸುವ ಕಾರ್ಯಕ್ರಮವಾಗಲಿ, ಧ್ಯಾನ ಸ್ಥಿತಿಯಲ್ಲಿರುವ ಗಾಂಧಿಜಿಯವರ ಭಾವ ಚಿತ್ರವನ್ನು ವಿವಿಧ ಇಲಾಖೆಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಅಳವಡಿಸುವುದಾಗಲಿ ಅಥವಾ ಗಾಂಧಿಜಿಯವರು ಬೋಧಿಸಿದ ಸಪ್ತಪಾತಕಗಳ ಫಲಕವನ್ನು ಪ್ರದರ್ಶಿಸುವುದಾಗಲಿ ಬಹಳ ಒಳ್ಳೆಯ ಕೆಲಸ. 'ಗಾಂಧಿಭಾರತ'ದ ಭಾಗವಾಗಿ ಶಾಲಾ ಶಿಕ್ಷಣದ ನೈತಿಕ ಶಿಕ್ಷಣದ ಅಂಗವಾಗಿ 'ನಾವು ಮನುಜರು' ಕಾರ್ಯಕ್ರಮವನ್ನು ರೂಪಿಸಿ ಅನುಷ್ಠಾನಕ್ಕೆ ತರುವ ಕಾರ್ಯವು ಅತ್ಯಂತ ಒಳ್ಳೆಯ ಪರಿಣಾಮ ಬೀರುತ್ತದೆ. ಗಾಂಧಿ ಭಾರತ ಕಾರ್ಯಕ್ರಮಕ್ಕೆ 25 ಕೋಟಿ ಬೃಹತ್ ಮೊತ್ತದ ಹಣ ಮೀಸಲಾಗಿರುವುದರಿಂದ ಮತ್ತು ಸದರಿ ಕಾರ್ಯಕ್ರಮಗಳನ್ನು ಆಯಾ ಇಲಾಖೆಗಳು ತಮಗೆ ಈಗಾಗಲೇ ಇರುವ ಅನುದಾನಗಳನ್ನು ಉಪಯೋಗಿಸಿಕೊಂಡು ನಡೆಸಬೇಕೆಂದು ಸರ್ಕಾರವು ಆದೇಶಿಸಿರುವುದರಿಂದ ಬಹಳಷ್ಟು ಹಣ ಗಾಂಧಿ ಭಾರತದ ಇತರ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಿಗುವುದರಲ್ಲಿ ಸಂದೇಹವಿಲ್ಲ. ಗಾಂಧಿಜಿಯನ್ನು ಸ್ಮರಣೆಮಾಡಲೋಸುಗ ಸ್ತೂಪ, ಇತ್ಯಾದಿಯಾದ ಯಾವ ಸ್ಮಾರಕಗಳ ನಿರ್ಮಾಣವೂ ಅಗತ್ಯವಿಲ್ಲ, ಇದಕ್ಕೆ ಗಾಂಧಿಜಿಯವರ ವಿರೋಧವಿತ್ತು ಎಂಬುದನ್ನು ಗಂಭೀರವಾಗಿ ಪರಿಗಣಿಸುತ್ತ ಗಾಂಧೀಜಿಯವರು ಭೇಟಿ ನೀಡಿದ ಸ್ಥಳಗಳಲ್ಲಿ ಸುಮಾರು 5 ಎಕರೆ ವಿಸ್ತೀರ್ಣದ ಗಾಂಧಿ ವನವನ್ನು ಬೆಳೆಸಬೇಕೆಂದು ಈ ವನದಲ್ಲಿ ಸ್ಥಳೀಯ ಜೀವವೈವಿಧ್ಯವನ್ನು ಪೋಷಿಸುವ ಕೆಲಸವಾಗಬೇಕೆಂದು ನಾವೆಲ್ಲರೂ ಆಗ್ರಹಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇವೆ. ಗಾಂಧಿಭಾರತ ಕಾರ್ಯಕ್ರಮದ ರೂಪುರೇಶೆಗಳು ಗಾಂಧಿ ತತ್ತ್ವಕ್ಕೆ ಅನುಗುಣವಾಗಿರಲೋಸುಗ ಹಿರಿಯ ಗಾಂಧಿವಾದಿಗಳು, ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಪದಾಧಿಕಾರಿಗಳನ್ನು ಚರ್ಚೆಗೆ ಆಹ್ವಾನಿಸಿ ಅಂತಿಮ ನಿರ್ಧಾರ ಕೈಗೊಳ್ಳಬೇಕೆಂದು ನಾವು ವಿನಂತಿಸಿಕೊಳ್ಳುತ್ತೇವೆ.

ಗಾಂಧಿಸ್ಮರಣೆಯನ್ನು ಗಮನದಲ್ಲಿಟ್ಟುಕೊಂಡು ನಡೆಸುವ 2024ರ ಅಧಿವೇಶನದ ಸಂದರ್ಭದಲ್ಲಿ ಯಾವುದೇ ದುಂದು ವೆಚ್ಚಗಳಿಗೆ ಎಡೆಮಾಡಿ ಕೊಡಬಾರದೆಂದೂ, ಅಂತಹ ದುಬಾರಿ ವೆಚ್ಚಗಳು ಗಾಂಧಿತತ್ತ್ವದ ಅಣಕವಾಗಿ ಪರಿಣಮಿಸುತ್ತದೆಂಬುದನ್ನು ತಮಗೆ ಮತ್ತೊಮ್ಮೆ ಹೇಳಬಯಸುತ್ತೇವೆ.

ಈ ಸಂದರ್ಭದಲ್ಲಿ ಇಡೀ ಬೆಳಗಾವಿಯನ್ನು ಅದ್ದೂರಿ ದೀಪಾಲಂಕಾರದಿಂದ ಝಗಝಗಿಸುವಂತೆ ಮಾಡುವ ಉದ್ದೇಶವಿದೆಯೆಂದು ತಿಳಿದು ಬಂದಿದೆ. ಇದು ಗಾಂಧೀಜಿಯವರಿಗೆ ನಾವು ಮಾಡುವ ಅಪಚಾರವಾದೀತೆ ಹೊರತು, ಅವರಿಗೆ ಸಲ್ಲಿಸುವ ಗೌರವವಲ್ಲ; ಆದ್ದರಿಂದ ಖಾವಂದರಾದ ತಾವು ಇಂತಹ ಅತಿರೇಕದ ಅರ್ಥಹೀನ ದುಂದುಗಾರಿಕೆಗೆ ಎಡೆಮಾಡಿಕೊಡಬಾರದೆಂದು ಕೋರುತ್ತೇವೆ.

ಗಾಂಧಿ ಭಾರತ ಕಾರ್ಯಕ್ರಮವು ಯಶಸ್ವಿಯಾಗಲಿ, ಇದಕ್ಕೆ ನಾಡಿನ ಸಹೃದಯರ ಸಹಕಾರವಿದೆಯೆಂದೂ ಆಶ್ವಾಸನೆ ನೀಡುತ್ತ ಗಾಂಧಿ ತತ್ತ್ವಗಳಿಗೆ ಅನುಗುಣವಾಗಿ ಕಾರ್ಯಕ್ರಮ ನಡೆಸಲು ತಾವು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವಂತಾಗಲಿ ಎಂದು ಹಾರೈಸುತ್ತೇವೆ.

**-ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ (ಸಾಣೇಹಳ್ಳಿ), ಶ್ರೀ ಗುರು ಬಸವ ಸ್ವಾಮೀಜಿ (ಪಾಂಡೋಮಟ್ಟಿ ವಿರಕ್ತ ಮಠ), ಎಸ್.ಜಿ. ಸಿದ್ಧರಾಮಯ್ಯ, ಮಹಿಮಾ ಪಟೇಲ್, ನಾಗೇಶ್ ಹೆಗಡೆ, ಎಲ್.ಎನ್. ಮುಕುಂದರಾಜ್, ಇ.ಎಸ್. ಜಯದೇವ, ಶಿವನಕೆರೆ ಬಸವಲಿಂಗಪ್ಪ ಮತ್ತಿತರರು.**


## ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ದಾವಣಗೆರೆ

ಕುವೆಂಪು ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ - 577002

## ನೂತನ ಬ್ಯಾಂಕ್ ಕಟ್ಟಡದ ಶಂಕುಸ್ಥಾಪನೆ ಸಮಾರಂಭದ ಆಹ್ವಾನ ಪತ್ರಿಕೆ

**ದಿನಾಂಕ : 26.12.2024ರಂದು ಗುರುವಾರ, ಸಮಯ : ಬೆಳಿಗ್ಗೆ 11.00 ಗಂಟೆಗೆ**

**ಸ್ಥಳ : ಶ್ರೀ ರವೀಂದ್ರನಾಥ ಬಡಾವಣೆ, ಸರ್ಕ್ಯೂಟ್ ಹೌಸ್ ಪಕ್ಕ, ಜಿಲ್ಲಾ ಪಂಚಾಯತಿ ಕಛೇರಿ ಎದುರು, ಎನ್.ಹೆಚ್. - 4, ದಾವಣಗೆರೆ**

**ಶಂಕುಸ್ಥಾಪನೆ :** **ಸನ್ಮಾನ್ಯ ಡಾ. ಶಿವಶಂಕರಪ್ಪನವರು,** ಮಾಜಿ ಸಚಿವರು, ಹಾಲಿ ಶಾಸಕರು, ದಾವಣಗೆರೆ ವಿಧಾನಸಭಾ ಕ್ಷೇತ್ರ
**ಸನ್ಮಾನ್ಯ ಶ್ರೀ ಎಸ್.ಎ. ರವೀಂದ್ರನಾಥ್‌ರವರು,** ಮಾಜಿ ಸಚಿವರು, ದಾವಣಗೆರೆ

**ಮುಖ್ಯ ಅತಿಥಿಗಳು :** **ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು**
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ
**ಸನ್ಮಾನ್ಯ ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್‌ರವರು,** ಲೋಕಸಭಾ ಸದಸ್ಯರು, ದಾವಣಗೆರೆ.
**ಸನ್ಮಾನ್ಯ ಶ್ರೀ ಜಿ.ಎಂ. ಸಿದ್ದೇಶ್‌ರವರು,** ಮಾಜಿ ಸಂಸದರು, ದಾವಣಗೆರೆ.
**ಸನ್ಮಾನ್ಯ ಶ್ರೀ ಷಡಕ್ಷರಿ ಕೆ.,** ಶಾಸಕರು ಅಧ್ಯಕ್ಷರು, ರಾಜ್ಯ ಭೂ ಬ್ಯಾಂಕ್ (ಕಾಸ್ಕಾರ್ಡ್)
**ಸನ್ಮಾನ್ಯ ಶ್ರೀ ಕೆ.ಎಸ್. ಬಸವಂತಪ್ಪನವರು,** ಶಾಸಕರು, ಮಾಯಾಕೊಂಡ ವಿಧಾನಸಭಾ ಕ್ಷೇತ್ರ
**ಸನ್ಮಾನ್ಯ ಶ್ರೀ ಕೆ.ಎಸ್. ನವೀನ್‌ಕುಮಾರ್,** ವಿಧಾನ ಪರಿಷತ್ ಸದಸ್ಯರು
**ಸನ್ಮಾನ್ಯ ಶ್ರೀ ಕೆ.ಉಳವಪ್ಪ ತಿ. ದಾಸನೂರ,** ಉಪಾಧ್ಯಕ್ಷರು, ರಾಜ್ಯ ಭೂ ಬ್ಯಾಂಕ್ (ಕಾಸ್ಕಾರ್ಡ್)
**ಸನ್ಮಾನ್ಯ ಶ್ರೀಮತಿ ಬಿ.ಎನ್. ಶೋಭಾ ಉಮೇಶ್ ಕುಮಾರ್,** ನಿರ್ದೇಕರು, ರಾಜ್ಯ ಬ್ಯಾಂಕ್
**ಸನ್ಮಾನ್ಯ ಶ್ರೀ ಸತೀಶ್,** ವ್ಯವಸ್ಥಾಪಕರು, ಕಾಸ್ಕಾರ್ಡ್ ಬ್ಯಾಂಕ್, ಬೆಂಗಳೂರು.
**ಸನ್ಮಾನ್ಯ ದಿನೇಶ್ ಕೆ.ಶೆಟ್ಟಿ,** ಅಧ್ಯಕ್ಷರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.
**ಸನ್ಮಾನ್ಯ ಶ್ರೀ ಚಮನ್ ಸಾಬ್,** ಪೂಜ್ಯ ಮಹಾಪೌರರು, ಮಹಾನಗರ ಪಾಲಿಕೆ, ದಾವಣಗೆರೆ.
**ಸನ್ಮಾನ್ಯ ಶ್ರೀ ಸೋಗಿ ಶಾಂತಕುಮಾರ್,** ಉಪಮಹಾಪೌರರು, ಮಹಾನಗರ ಪಾಲಿಕೆ, ದಾವಣಗೆರೆ.
**ಸನ್ಮಾನ್ಯ ಶ್ರೀಮತಿ ರೇಣುಕ** ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ
**ಸನ್ಮಾನ್ಯ ಶ್ರೀ ತಿಮ್ಮಣ್ಣ ಹುಲ್ಮನಿ,** ಆಯುಕ್ತರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

**ಅಧ್ಯಕ್ಷತೆ :** **ಶ್ರೀ ಆರ್.ಜಿ. ಕುಬೇಂದ್ರಪ್ಪನವರು,**
ಅಧ್ಯಕ್ಷರು, ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ದಾವಣಗೆರೆ

**ಅತಿಥಿಗಳು :** **ಶ್ರೀ ಮಧು ಶ್ರೀನಿವಾಸ ಟಿ.,** ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ.
**ಶ್ರೀಮತಿ ಮಂಜುಳ,** ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ.
**ಶ್ರೀಮತಿ ಶ್ವೇತಾ ದೇವರಾಜ್,** ಜಿಲ್ಲಾ ವ್ಯವಸ್ಥಾಪಕರು, ಕಾಸ್ಕಾರ್ಡ್ ಬ್ಯಾಂಕ್

**ಪಿ.ಎಲ್.ಡಿ. ಬ್ಯಾಂಕಿನ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸರ್ವ ಸದಸ್ಯರು, ದಾವಣಗೆರೆ.**

**ಆಡಳಿತ ಮಂಡಳಿ ಸದಸ್ಯರು**

**ಶ್ರೀ ಕುಬೇಂದ್ರಪ್ಪ ಆರ್.ಜಿ** ಅಧ್ಯಕ್ಷರು

**ಶ್ರೀಮತಿ ಜ್ಯೋತಿ ಸಿ.ಯು.** ಉಪಾಧ್ಯಕ್ಷರು

**ನಿರ್ದೇಶಕರುಗಳಾದ**

♦ ಶ್ರೀ ಎ.ಎಂ. ಮಂಜುನಾಥ ♦ ಶ್ರೀ ಜಿ.ಎ ಮಂಜುನಾಥ ♦ ಶ್ರೀ ಕೆ.ಎಂ. ರೇವಣಸಿದ್ದಪ್ಪ ♦ ಶ್ರೀ ಕೆ. ಬಸವರಾಜಪ್ಪ ♦ ಶ್ರೀಮತಿ ಸವಿತ ಟಿ.ಎಂ.
♦ ಶ್ರೀ ರಮೇಶ್ ಬಿ.ಎಸ್. ♦ ಶ್ರೀ ವೈ.ಬಿ. ನಾಗರಾಜ ♦ ಶ್ರೀ ಎಂ.ಪಿ. ದೇವೇಂದ್ರಪ್ಪ ♦ ಶ್ರೀ ರಾಜಪ್ಪ ♦ ಶ್ರೀಮತಿ ರೇಣುಕಮ್ಮ
● ಶ್ರೀ ಆರ್. ನಟರಾಜ, ವ್ಯವಸ್ಥಾಪಕರು ● ಶ್ರೀಮತಿ ಸರ್ವಮಂಗಳ ಕೆ. ಮಳಿಮಠ್ ಪ್ರಭಾರ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗ

**ಸರ್ವರಿಗೂ ಸುಸ್ವಾಗತ**

ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ 86 ವರ್ಷಗಳನ್ನು ಪೂರೈಸಿದೆ. ಬ್ಯಾಂಕಿನ ಪ್ರಥಮ ಅಧ್ಯಕ್ಷರಾದ ಡಿ.ಹೆಚ್. ಚಂದ್ರಶೇಖರಯ್ಯನವರೂ ಸೇರಿದಂತೆ ಅನೇಕ ಪ್ರಮುಖರು ಅಧ್ಯಕ್ಷರಾಗಿ ಬ್ಯಾಂಕಿನ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಪ್ರಸ್ತುತ ಅಧ್ಯಕ್ಷರಾಗಿ ಆರ್.ಜಿ. ಕುಬೇಂದ್ರಪ್ಪ (ರಾಮಗೊಂಡನಹಳ್ಳಿ) ಇವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಬ್ಯಾಂಕಿನ ನೂತನ ಕಟ್ಟಡಕ್ಕೆ ಮಾಜಿ ಸಚಿವರಾದ **ಎಸ್.ಎ. ರವೀಂದ್ರನಾಥ,** ಹಿರಿಯ ಶಾಸಕರಾದ **ಡಾ. ಶಾಮನೂರು ಶಿವಶಂಕರಪ್ಪ,** ಮಾಜಿ ಸಂಸದರಾದ **ಜಿ.ಎಂ ಸಿದ್ದೇಶ್ವರ** ಮತ್ತಿತರರ ಸಹಕಾರದಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಸರ್ಕ್ಯೂಟ್ ಹೌಸ್ ಪಕ್ಕದಲ್ಲಿ 0.05 ಗುಂಟೆ ಜಾಗವನ್ನು ನೀಡಲಾಗಿದೆ.



**ಕಾಯಿಪೇಟೆ ಬಸವೇಶ್ವರ ದೇವಸ್ಥಾನ ಸೇವಾ ಸಂಘದಿಂದ ಮಹೇಶ್ವರ ಜಾತ್ರೆ**

ದಾವಣಗೆರೆ ಕಾಯಿಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘದ ವತಿಯಿಂದ ಬುಧವಾರ ಪೂಜಾ ಇಂಟರ್ ನ್ಯಾಷನಲ್ ಹೋಟೆಲ್ ಪಕ್ಕದಲ್ಲಿರುವ ಶ್ರೀ ಮಹೇಶ್ವರ ಸ್ವಾಮಿ ನಿವೇಶನದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಜಾತ್ರೆ ವಿಜೃಂಭಣೆಯಿಂದ ನಡೆಯಿತು. ಎರಡನೇ ದಿನವಾದ ಬುಧವಾರ ಭಕ್ತರು ಅನ್ನ, ಸಾರು ಪ್ರಸಾದ ಸೇವಿಸಿದರು.

# ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು ಅಳವಡಿಸಲು ಕರೆ

ದಾವಣಗೆರೆ, ಡಿ.24- ನಗರದಲ್ಲಿ ಈಗಾಗಲೇ ಮಳೆ ನೀರು ಕೊಯ್ಲು ಕಡ್ಡಾಯವಾಗಿದೆ. ಆದರೂ ಬಹಳಷ್ಟು ಮನೆಗಳಲ್ಲಿ ಅಳವಡಿಸಿಕೊಂಡಿರುವುದಿಲ್ಲ, ಇದು ನೀರಿನ ಅಭಾವದ ಜೊತೆಗೆ ಅಂತ ರ್ಜಲಮಟ್ಟ ಕುಸಿತವಾಗಲು ಕಾರಣ ವಾಗಿದ್ದು, ಕಟ್ಟಡಗಳಲ್ಲಿ ಮಳೆ ನೀರು ಕೊಯ್ಲು ವಿಧಾನವನ್ನು ಕಡ್ಡಾಯವಾಗಿ ಅಳವಡಿಸಿ ಕೊಳ್ಳಬೇಕೆಂದು ಪಾಲಿಕೆ ಆಯುಕ್ತೆ ರೇಣುಕ ತಿಳಿಸಿದ್ದಾರೆ.



ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿರುವುದು ಹಾಗೂ ಕಟ್ಟಡದ ಮಾಲೀಕರು ಕಟ್ಟಡದಲ್ಲಿ ಮಳೆ ನೀರು ಕೊಯ್ಲಿನ ವಿಧಾನವನ್ನು ಅಳವಡಿಸದೇ ಇರುವುದು ಕಂಡುಬಂದಿದ್ದು, ಅಂತಹ ಕಟ್ಟಡದ ಮಾಲೀಕರಿಗೆ ದಂಡ ವಿಧಿಸಲಾಗುವುದು.

ಪಾಲಿಕೆ ವ್ಯಾಪ್ತಿಯಲ್ಲಿ ದೊಡ್ಡ ಮನೆಗಳಿಗೆ (40*60 ಅಡಿ ಮೇಲ್ಪಟ್ಟ ನಿವೇಶನಗಳಲ್ಲಿನ ಕಟ್ಟಡ/ಜಿ+2 ಕಟ್ಟಡ) ರೂ 10,000 ಹಾಗೂ ಚಿಕ್ಕಮನೆಗಳಿಗೆ ರೂ 5,000 ರಂತೆ ದಂಡವನ್ನು ಕಟ್ಟಡದ ಮಾಲೀಕರಿಂದ ಪಾವತಿಸಿಕೊಳ್ಳಲಾಗುತ್ತದೆ ಎಂಬ ಸೂಚನೆ ಕೊಟ್ಟಿದ್ದಾರೆ. ನಗರ ಯೋಜನೆ ಶಾಖೆಯಿಂದ ಎಲ್.ಬಿ.ಪಿ.ಎ.ಎಸ್ ಆನ್‌ಲೈನ್ ತಂತ್ರಾಂಶದಲ್ಲಿ ಕಟ್ಟಡ ಪರವಾನಿಗೆ ಅರ್ಜಿಗಳನ್ನು ಸ್ವೀಕರಿಸಿ ವಸತಿ, ವಾಣಿಜ್ಯ, ಕೈಗಾರಿಕೆ ಹಾಗೂ ಇತರೆ ಉದ್ದೇಶದ ಕಟ್ಟಡ ನಿರ್ಮಿಸಲು ಕಟ್ಟಡ ಪರವಾನಿಗೆ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

# ಮನದಲ್ಲಿ ಪ್ರೀತಿ, ಮುಖದಲ್ಲಿ ಮುಗುಳ್ನಗೆ ಇರಲಿ

## ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ 55ನೇ ವಾರ್ಷಿಕ ಸಂಭ್ರಮ ಸಮಾರಂಭದಲ್ಲಿ ಡಾ.ಸಿ.ಆರ್. ಚಂದ್ರಶೇಖರ್

ದಾವಣಗೆರೆ, ಡಿ. 25- ಆನಂದದ ಜೀವನಕ್ಕಾಗಿ ಮನದಲ್ಲಿ ಪ್ರೀತಿ, ಮುಖದಲ್ಲಿ ಮುಗುಳ್ನಗೆ ಇರಲಿ ಎಂದು ಖ್ಯಾತ ಮಾನಸಿಕ ಆರೋಗ್ಯ ತಜ್ಞ, ಲೇಖಕ ಪದ್ಮಶ್ರೀ ಡಾ.ಸಿ. ಆರ್. ಚಂದ್ರಶೇಖರ್ ಹೇಳಿದರು.

ಬುಧವಾರ ಸಂಜೆ ಇಲ್ಲಿನ ಸಿದ್ಧಗಂಗಾ ಸಂಸ್ಥೆಯ 55ನೇ ವಾರ್ಷಿಕ ಸಂಭ್ರಮ-2024-25, ಶಿಕ್ಷಣ ಶಿಲ್ಪಿ ಡಾ.ಎಂಎಸ್‌ಎಸ್. ಪ್ರಶಸ್ತಿ ಪ್ರದಾನ, ಎಂಎಸ್‌ಎಸ್ ಕ್ವಿಜ್ ಬಹುಮಾನ ವಿತರಣೆ, ಪ್ರತಿಭಾ ಪುರಸ್ಕಾರ, ಸಾಂಸ್ಕೃತಿಕ ಸಂಭ್ರಮ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.



ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಸಾಮರಸ್ಯ ಮರೆಯಾಗಿದೆ. ಅದನ್ನು ಕಾಪಾಡಿಕೊಳ್ಳಬೇಕಿದೆ.ದೊಡ್ಡವರೇ ಶಾಂತಿ ಕದಡುತ್ತಿದ್ದಾರೆ. ಈ ಸಂದರ್ಭದಲ್ಲಿ ಮಕ್ಕಳು ಶಾಂತಿ ಕಾಪಾಡಬೇಕಿದೆ ಎಂದು ತಿಳಿಸಿದರು.

ಮಾನಸಿಕ ಒತ್ತಡ ಸೇರಿದಂತೆ ಹಲವು ಕಾರಣಗಳಿಗಾಗಿ ಪ್ರತಿ ಗಂಟೆಗೆ ಓರ್ವ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವು ದಾಗಿ ಎನ್‌ಸಿಆರ್ ವರದಿಯೇ ಹೇಳಿದೆ. ಮಕ್ಕಳು ಮಾನಸಿಕವಾಗಿ ಗಟ್ಟಿಯಾಗಬೇಕು. ದೇಹಕ್ಕೆ ಮಾಡುವಷ್ಟೇ ಅಲಂಕಾರ ಮನಸ್ಸಿಗೂ ಅಗತ್ಯವಿದೆ. ಅದು ಪ್ರೀತಿಯಿಂದ ಸಾಧ್ಯ ಎಂದರು.

ಬಸವಣ್ಣನವರು ದಯವೇ ಧರ್ಮದ ಮೂಲ ಎಂದರು, ಏಸು ಕ್ರಿಸ್ತ, ಬುದ್ಧ ಹೇಳಿದ್ದೂ ಅದನ್ನೇ ಹೀಗಾಗಿ ಪ್ರತಿಯೊಬ್ಬರಲ್ಲೂ ಪ್ರೀತಿ, ದಯೆ, ಶಾಂತಿ ಇರಬೇಕು. ಗುರು ಹಿರಿಯರನ್ನು, ತಂದೆ-ತಾಯಿಯನ್ನು, ಶಿಕ್ಷಕರನ್ನು, ನೆರೆ ಹೊರೆಯ ವರನ್ನು, ಪ್ರಾಣಿ-ಪಕ್ಷಿಗಳನ್ನು ಪ್ರೀತಿಯಿಂದ ಕಾಣಬೇಕು. ಶಾಂತ ಚಿತ್ತರಾಗಿದ್ದರೆ ಆರೋಗ್ಯ ತಾನಾಗಿಯೇ ಉತ್ತಮವಾಗಿರುತ್ತದೆ ಎಂದು ಸಲಹೆ ನೀಡಿದರು.

ಪ್ರತಿಯೊಬ್ಬರಿಗೂ ಒಂದೇ ಗಾತ್ರದ ಮೆದುಳಿರುತ್ತದೆ. ಆದರೆ ಅದನ್ನು ಸರಿಯಾಗಿ ಉಪಯೋಗಿಸಿಕೊಂಡು ಜೀವನ ಸಾರ್ಥಕ ಮಾಡಿಕೊಳ್ಳಬೇಕು. ದೇಶವು ಸಾಧಕರನ್ನು ನೆನೆಯುತ್ತದೆಯೇ ಹೊರತು, ಶ್ರೀಮಂತರನ್ನಲ್ಲ. ಆದ್ದರಿಂದ ಸಾಧನೆ ಮಾಡುವತ್ತ ಗಮನ ಹರಿಸಬೇಕು ಎಂದರು.

ಕುಟುಂಬಗಳಲ್ಲಿ ಸಾಮರಸ್ಯ ಮರೆಯಾಗುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದ ಚಂದ್ರಶೇಖರ್, ಕುಟುಂಬದ ಸದಸ್ಯರನ್ನು ಪ್ರೀತಿಸಬೇಕು, ಗೌರವಿಸಬೇಕು. ಸರಿ ಪ್ರಮಾಣದ ಪ್ರೀತಿ ಆನಂದದ ತಾಯಿ ಬೇರು ಎಂದು ಕಿವಿ ಮಾತು ಹೇಳಿದರು.

ವಿದ್ಯಾರ್ಥಿಗೆ ಜೀವನದಲ್ಲಿ ಶಿಸ್ತು ಮುಖ್ಯ. ಹೆತ್ತವರು ಮೊದಲು ಶಿಸ್ತು ರೂಢಿಸಿಕೊಂಡು ಮಕ್ಕಳಿಗೂ ಕಲಿಸಬೇಕು. ಊಟದಲ್ಲಿ, ನಿದ್ರೆಯಲ್ಲಿ, ಜೀವನ ಕ್ರಮದಲ್ಲಿ ಶಿಸ್ತು ಅಳವಡಿಸಿಕೊಳ್ಳಬೇಕು .ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಗಾಗಿ ಉತ್ತಮ ಆಹಾರ ಪದ್ಧತಿ, ವ್ಯಾಯಾಮ, ರೂಢಿಸಿಕೊಳ್ಳಬೇಕು. ಸಸ್ಯಹಾರ, ಸಾತ್ವಿಕ ಆಹಾರವೇ ಶ್ರೇಷ್ಠವಾದದ್ದು. ಮಾಂಸಹಾರವಾದರೆ ಮಿತವಾಗಿರಬೇಕು ಎಂದು ಹೇಳಿದರು.

ಶಿಕ್ಷಣ ತಜ್ಞ ಕೆ.ಇಮಾಂ ಅವರಿಗೆ ಎಂಎಸ್‌ಎಸ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಿದ್ಧಗಂಗಾ ಶಾಲೆ (ಸಿಬಿಎಸ್‌ಸಿ) ಪ್ರಾಚಾರ್ಯರಾದ ಗಾಯತ್ರಿ ಚಿಮ್ಮಡ್ ಅಧ್ಯಕ್ಷತೆ ವಹಿಸಿದ್ದರು.

ಸಂಸ್ಥೆಯ ಮುಖ್ಯಸ್ಥೆ ಜಸ್ಟಿನ್ ಡಿ'ಸೋಜ, ನಿರ್ದೇಶಕ ಡಿ.ಎಸ್. ಜಯಂತ್, ಶ್ರೀ ಸಿದ್ಧಗಂಗಾ ಸ್ಕೂಲ್ ದೈಹಿಕ ಶಿಕ್ಷಕ ರಘು ಹೆಚ್.ಎಸ್., ಸಹ ಶಿಕ್ಷಕ ಮಹೇಶ್ ಎಂ.ಸಿ., ಮತ್ತೋರ್ವ ಸಹ ಶಿಕ್ಷಕ ಪುಟ್ಟಸ್ವಾಮಿ ಎಂ. ಉಪಸ್ಥಿತರಿದ್ದರು.

ಎಂಎಸ್‌ಎಸ್ ಕ್ರೀಡಾ ರತ್ನ ಪ್ರಶಸ್ತಿಯನ್ನು ಅಭಿಷೇಕ್ ಎಂ.ಕೆ. ಹಾಗೂ ವರ್ಷದ ಉತ್ತಮ ಪ್ರೌಢಶಾಲಾ ವಿದ್ಯಾರ್ಥಿ ಪ್ರಶಸ್ತಿಯನ್ನು ಕೆ.ಪಿ. ಯಶಸ್ವಿನಿ ಇವರಿಗೆ ನೀಡಿ ಗೌರವಿಸಲಾಯಿತು. ಮುಖ್ಯ ಶಿಕ್ಷಕಿ ರೇಖಾರಾಣಿ ಕೆ.ಎಸ್. ನಿರೂಪಿಸಿದರು. ಇದಕ್ಕೂ ಮುನ್ನ ಕು. ನಿಹಾರಿಕಾ ಸಂಗಡಿಗರಿಂದ ಸುಗಮ ಸಂಗೀತ, ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

# ಅಭಿವೃದ್ಧಿಯ ಹರಿಕಾರ ಅಟಲ್ ಬಿಹಾರಿ ವಾಜಪೇಯಿ

## 100ನೇ ಜನ್ಮದಿನದ ಸಮಾರಂಭದಲ್ಲಿ ಹರಿಹರ ಶಾಸಕ ಬಿ.ಪಿ. ಹರೀಶ್ ಪ್ರಶಂಸೆ

ದಾವಣಗೆರೆ, ಡಿ. 25- ಭಾರತ ರತ್ನ, ಮಾಜಿ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ 100ನೇ ಜನ್ಮದಿನದ ಅಂಗವಾಗಿ ಇಂದು ದಾವಣಗೆರೆ ಹೊರ ವಲಯದಲ್ಲಿರುವ ಜಿಲ್ಲಾ ಪಂಚಾಯತ್ ಕಚೇರಿ ಮುಂಭಾಗ ಜಿಲ್ಲಾ ಬಿಜೆಯಿಂದ ಬುಧವಾರ 'ಸುಶಾಸನ ದಿನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಹರಿಹರ ಶಾಸಕ ಬಿ.ಪಿ. ಹರೀಶ್, ಈ ದೇಶದ ಮೂಲೆ ಮೂಲೆಯಲ್ಲಿರುವ ಹಳ್ಳಿಗಳಿಗೂ ಸಂಪರ್ಕ ಕಲ್ಪಿಸಬೇಕು ಎನ್ನುವುದು ಅಟಲ್ ಬಿಹಾರಿ ವಾಜಪೇಯಿ ಅವರ ಕನಸಾಗಿತ್ತು. ರಾಷ್ಟ್ರೀಯ ಹೆದ್ದಾರಿ ನಿರ್ಮಿಸಿ ಅದನ್ನು ನನಸು ಮಾಡಿದ್ದಾರೆ ಎಂದರು.

ಇಂದು ಅನೇಕರು ಬದುಕಿದ್ದಾಗಲೇ ಮಾಡಿದ ಕೆಲಸಗಳಿಗೆ ತಮ್ಮ ಹೆಸರಿಟ್ಟುಕೊಳ್ಳುತ್ತಾರೆ. ಆದರೆ ವಾಜಪೇಯಿ ಆರೀತಿ ಮಾಡದೆ ಗ್ರಾಮೀಣ ಸಡಕ್ ಯೋಜನೆಗೆ ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಎಂಬ ಹೆಸರು ನೀಡಿದರು. ಅವರ ದೇಶದ ಅಭಿವೃದ್ಧಿಯ ಹರಿಕಾರ. ಅಂತಹ ಮಹಾನ್ ನಾಯಕರು ಹುಟ್ಟುಹಬ್ಬವನ್ನು ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳ ಚಾಲಕರಿಗೆ ಸಿಹಿ ಹಂಚುವ ಮೂಲಕ ಮಾಡಲಾಗುತ್ತಿದೆ ಎಂದರು.



ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ್ ನಾಗಪ್ಪ, ಪ್ರಧಾನ ಕಾರ್ಯದರ್ಶಿ ಧನಂಜಯ ಕಡ್ಲೆಬಾಳು, ಅನಿಲ್ ಕುಮಾರ್ ನಾಯಕ್, ಐರಣಿ ಅಣ್ಣೇಶ್, ಮುಖಂಡರುಗಳಾದ ಎಸ್. ಎಂ. ವೀರೇಶ್ ಹನಗವಾಡಿ, ಬಸವರಾಜ ನಾಯ್ಕ, ಕೆ.ಎಂ. ವೀರೇಶ್, ರಾಜನಹಳ್ಳಿ ಶಿವಕುಮಾರ್, ಲೋಕಿಕೆರೆ ನಾಗರಾಜ್, ಚಂದ್ರಶೇಖರ್ ಪೂಜಾರ್, ಹೆಚ್.ಎನ್. ಶಿವಕುಮಾರ್, ಶಿವರಾಜ್ ಪಟೇಲ್, ಸಿದ್ದೇಶ್, ವಿಶ್ವಾಸ ಹೆಚ್.ಪಿ, ಎನ್. ಹೆಚ್ ಹಾಲೇಶ್, ಹನುಮಂತಪ್ಪ, ಬಸವರಾಜ್, ಕಿಶೋರ್ ಕುಮಾರ್, ಶಾಮನೂರು ರಾಜು, ಹರೀಶ್, ಪಂಜು, ಪ್ರವೀಣ್, ನವೀನ್, ಗುರು ಸೋಗಿ ಇತರರು ಭಾಗವಹಿಸಿದ್ದರು.

# ಚುನಾವಣಾ ಹೊಂದಾಣಿಕೆ ಬಗ್ಗೆ ಮೊದಲು ನಾನೇ ಹೇಳಿದ್ದೆ : ಹರೀಶ್

ದಾವಣಗೆರೆ, ಡಿ. 25- ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಹೊಂದಾಣಿಕೆ ರಾಜಕಾರಣ ಮಾಡಿದ್ದಾರೆ ಎನ್ನುವುದು ಸತ್ಯ. ಇದಲಿಂದಲೇ ಬಿಜೆಪಿ ಲೋಕಸಭಾ ಕ್ಷೇತ್ರ ಕಳೆದುಕೊಳ್ಳಬೇಕಾಯಿತು ಎಂದು ಬಿಜೆಪಿ ಶಾಸಕ ಬಿ.ಪಿ ಹರೀಶ್ ಮತ್ತೊಮ್ಮೆ ಹೇಳಿದರು.

ಜಿಲ್ಲಾ ಪಂಚಾಯ್ತಿ ಕಚೇರಿ ಬಳಿ ಮಾಧ್ಯಮ ದವರೊಂದಿಗೆ ಮಾತನಾಡಿದ ಅವರು, ಹೊಂದಾ ಣಿಕೆ ರಾಜಕೀಯದ ಬಗ್ಗೆ ಶಾಸಕ ಶಿವಗಂಗಾ ಬಸವರಾಜ್ ಹೇಳಿರುವುದಕ್ಕಿಂತ ಮುಂಚಿನಿಂ ದಲೂ ನಾನು ಹೇಳುತ್ತಾ ಬಂದಿದ್ದೇನೆ ಎಂದರು.

'ಪಾಪ' ಮಾಡಿದವರ ಹೆಸರನ್ನು ಶಿವಗಂಗಾ ಬಸವರಾಜ್ ಬಹಿರಂಗ ಪಡಿಸಲಿ. ಈ ಒಳ ಒಪ್ಪಂದದಿಂದ ಬಿಜೆಪಿ ಸೋಲಿಸಿದವರಿಗೆ ಮುಂದಿನ ದಿನಗಳಲ್ಲಿ ಜನರು ಪಾಠ ಕಲಿಸುತ್ತಾರೆ ಎಂದರು. ಜಿಲ್ಲಾ ಉಸ್ತುವಾರಿ ಸಚಿವರ ಬಗ್ಗೆ ಕಾಂಗ್ರೆಸ್ ಶಾಸಕರಿಗೆ ಬೇಸರವಾಗಿದೆ. ಆ ಪಕ್ಷದ ಶಾಸಕರಿಗೇ ಅನುದಾನ ಕೊಡುತ್ತಿಲ್ಲ ಇನ್ನೂ ನಮಗೆಲ್ಲಿ ಕೊಡ್ತಾರೆ ಎಂದು ಉಸ್ತುವಾರಿ ಸಚಿವರ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದರು.

# ರಾಘವೇಂದ್ರ ಮಠಕ್ಕೆ ಸೋಂದಾ ಶ್ರೀಗಳು



ದಾವಣಗೆರೆ, ಡಿ. 25- ನಗರದ ಕೆ.ಬಿ. ಬಡಾವಣೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠಕ್ಕೆ ಶ್ರೀ ಸೋಂದಾ ಮಠದ ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಪಾದಂಗಳವರು ನಿನ್ನೆ ಭೇಟಿ ನೀಡಿ ಶ್ರೀರಾಯರ ದರ್ಶನ ಪಡೆದರು.

ಈ ಸಂದರ್ಭದಲ್ಲಿ ಶ್ರೀ ಗುರುರಾಜ ಸೇವಾ ಸಂಘದ ಅಧ್ಯಕ್ಷ ಪ್ರಸನ್ನ ಕುಮಾರ್ ದಂಪತಿ ಶ್ರೀಗಳವರಿಗೆ ಪಾದ ಪೂಜೆ ನೆರವೇರಿಸಿ ಆಶೀರ್ವಾದ ಪಡೆದರು. ಶ್ರೀ ಗುರುರಾಜ ಸೇವಾ ಸಂಘದ ಇತರ ಪದಾಧಿಕಾರಿಗಳು, ಸದಸ್ಯರು, ಶ್ರೀಮಠದ ಸಿಬ್ಬಂದಿ ಹಾಜರಿದ್ದರು.

# ಕಜಕಿಸ್ತಾನದಲ್ಲಿ ವಿಮಾನ ಪತನ 30ಕ್ಕೂ ಹೆಚ್ಚು ಸಾವು

ಮಾಸ್ಕೋ, ಡಿ.25- ಅಜರ್‌ಬೈಜಾನಿಯಾ ವಿಮಾನವೊಂದು ಕಜಕಿಸ್ತಾನದ ಅಕ್ಟೌ ಎಂಬಲ್ಲಿ ಪತನಗೊಂಡಿದ್ದು, 30ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ. ವಿಮಾನದಲ್ಲಿ ಐವರು ಸಿಬ್ಬಂದಿ ಸೇರಿದಂತೆ 67 ಜನರಿದ್ದರು. ವಿಮಾನ ಪತನದ ನಂತರ 28 ಜನ ಉಳಿದುಕೊಂಡಿದ್ದು, ಇವರಲ್ಲಿ 22 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.





**ಬಸಾಪುರದ ಮಹೇಶ್ವರ ಜಾತ್ರೆಯಲ್ಲಿ ಸಚಿವ ಎಸ್ಸೆಸ್ಸೆಂ**

ದಾವಣಗೆರೆ ಸಮೀಪದ ಬಸಾಪುರದಲ್ಲಿ ಬುಧವಾರ ನಡೆದ ಮಹೇಶ್ವರ ಸ್ವಾಮಿ ಜಾತ್ರೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಭಾಗವಹಿಸಿ ಭಕ್ತಿ ಸಮರ್ಪಿಸಿದರು. ಕೈಗಾರಿಕೋದ್ಯಮಿ ಎಸ್.ಎಸ್.ಗಣೇಶ್, ಪಾಲಿಕೆ ಮಹಾಪೌರರಾದ ಕೆ. ಚಮನ್ ಸಾಬ್, ಹಿರಿಯ ಸಾಹಿತಿ ಬಾ. ಮ. ಬಸವರಾಜಯ್ಯ, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರ ಗಿರೀಶ್, ಯುವ ಮುಖಂಡ ಸಮರ್ಥ್ ಶಾಮನೂರು ಮುಂತಾದ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸೆನೆಟ್ ಚುನಾವಣೆಯಲ್ಲಿ ಡಾ. ಶ್ರೀನಿವಾಸ್ ಜಯ



ದಾವಣಗೆರೆ, ಡಿ.25- ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸೆನೆಟ್ ಚುನಾವಣೆಯಲ್ಲಿ ಅತ್ಯಧಿಕ ಮತಗಳನ್ನು ಪಡೆಯುವ ಮೂಲಕ ಜಯ ದಾಖಲಿಸಿದ ಜೆಜೆಎಂ ವೈದ್ಯಕೀಯ ಕಾಲೇಜಿನ ಔಷಧಶಾಸ್ತ್ರ ವಿಭಾಗದ ಪ್ರೊಫೆಸರ್ ಡಾ. ಶ್ರೀನಿವಾಸ್ ಎಲ್.ಡಿ. ಅವರಿಗೆ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಶುಭ ಕೋರಿದರು.

ಇದೇ ದಿನಾಂಕ 10 ರಂದು ಜೆಜೆಎಂ ವೈದ್ಯಕೀಯ ಕಾಲೇಜು ಆವರಣದಲ್ಲಿ ಸೆನೆಟ್ ಚುನಾವಣೆಗೆ ಮತದಾನ ಪ್ರಕ್ರಿಯೆ ನಡೆದಿತ್ತು. ಈ ಚುನಾವಣೆಯಲ್ಲಿ ಚಲಾವಣೆಗೊಂಡು ಸ್ವೀಕೃತವಾದ 6,217 ಮತಗಳಲ್ಲಿ ಡಾ. ಶ್ರೀನಿವಾಸ್ 875 ಮತಗಳನ್ನ ಪಡೆದು ಆಯ್ಕೆಯಾಗಿದ್ದಾರೆ. ಈ ಪೈಕಿ ಪ್ರಥಮ ಪ್ರಾಶಸ್ತ್ಯದ 670 ಮತಗಳನ್ನ ಪಡೆಯುವ ಮೂಲಕ ಎಣಿಕೆಯ ಮೊದಲ ಸುತ್ತಿನಲ್ಲಿಯೇ, ವಿಜಯದೆಡೆಗೆ ದಾಪುಗಾಲಿಟ್ಟಿದ್ದರು.

ಶ್ರೀನಿವಾಸ್ ಅವರನ್ನು ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯ ಸಂಪಣ್ಣ ಮುತಾಲಿಕ್, ಎಸ್. ಎಸ್. ಮೆಡಿಕಲ್ ಕಾಲೇಜು ಪ್ರಾಂಶುಪಾಲ ಡಾ ಬಿ.ಎಸ್ ಪ್ರಸಾದ್, ಎಸ್‌ಎಸ್‌ಐಎಮ್‌ಎಸ್ ವ್ಯವಸ್ಥಾಪಕ ರವಿ ಆರ್ ಜಿ, ಡಾ.ಸತೀಶ್, ಡಾ.ಹರೀಶ್, ಸುಶ್ರುತ ಆಸ್ಪತ್ರೆಯ ಡಾ.ಸತೀಶ್ ಬಿ.ಜಿ., ಡಾ. ಹರೀಶ್ ಬಿ.ಜಿ., ಡಾ. ಶಿವಶಂಕರ್, ಡಾ.ಚಂದ್ರಪ್ಪ, ದವನ್ ಕಾಲೇಜಿನ ವೀರೇಶ್ ಪಟೇಲ್ ಅಭಿನಂದಿಸಿದ್ದಾರೆ.

# ಮಾಜಿ ಪ್ರಧಾನಿ ವಾಜಪೇಯಿ ಅಜಾತ ಶತ್ರು

## ಸರಸ್ವತಿ ನಗರದಲ್ಲಿ ಉದ್ಯಾನವನ ಉದ್ಘಾಟಿಸಿದ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್



ದಾವಣಗೆರೆ, ಡಿ. 25- ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ 100ನೇ ಜನ್ಮದಿನದ ಅಂಗವಾಗಿ ಇಲ್ಲಿನ ಸರಸ್ವತಿ ನಗರ ಬಿ ಬ್ಲಾಕ್‌ನಲ್ಲಿರುವ ಉದ್ಯಾನವನಕ್ಕೆ ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಉದ್ಯಾನವನ ಎಂದು ನಾಕರಣ ಮಾಡಿ ಉದ್ಘಾಟಿಸಲಾಯಿತು.

ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಉದ್ಯಾನವನ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ಯಾರೂ ದ್ವೇಷಿಸದಂತಹ ಧೀಮಂತ ನಾಯಕ ವಾಜಪೇಯಿ ಅವರು. ಅವರಿಂದಾಗಿಯೇ ದೇಶದ ಹಳ್ಳಿ ಹಳ್ಳಿಗಳಿಗೂ ಸಂಪರ್ಕ ಸಾಧ್ಯವಾಗಿ, ದೇಶ ಅಭಿವೃದ್ಧಿ ಪಥದತ್ತ ಸಾಗಲು ಕಾರಣವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ 33ನೇ ವಾರ್ಡ್ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ದೂಡಾ ಮಾಜಿ ಅಧ್ಯಕ್ಷ ಕೆ.ಎಂ. ಸುರೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಮುಖಂಡರಾದ ಲೋಕಿಕೆರೆ ನಾಗರಾಜ್, ಮುಪ್ಪಣ್ಣ, ಎಲ್.ಎನ್. ಕಲ್ಲೇಶ್, ಶಂಕರ್ ಸಿಂಗ್ ನಾಯಕ್, ಜಯ ನಾಯಕ್, ಎಚ್. ಬಸಣ್ಣ, ಮಂಜುನಾಥ್ ಸ್ವಾಮಿ, ನಾಗರಾಜ್, ಎನ್. ಸುನಿಲ್, ಆಂಜನಪ್ಪ, ತಿಪ್ಪೇಶ್ ನಾಯಕ್, ಶಾಮ್ ನಾಯಕ್, ವಿಜಯ, ಸೋಮಶೇಖರ್ ಕಾಡಜ್ಜಿ, ಮಂಜುಳಮ್ಮ ಇತರರು ಈ ಸಂದರ್ಭದಲ್ಲಿದ್ದರು.

# ಅಪರಿಚಿತ ಶವಗಳ ಪತ್ತೆಗಾಗಿ ಬಯೋ ಮೆಟ್ರಿಕ್ ತಂತ್ರಜ್ಞಾನ ಬಳಸಲು ಷಾ ಕರೆ

ನವದೆಹಲಿ , ಡಿ. 25- ಅಪರಿಚಿತ ವ್ಯಕ್ತಿಗಳು ಹಾಗೂ ಅಪರಿಚಿತ ಶವಗಳ ಪತ್ತೆಗಾಗಿ ಬಯೋಮೆಟ್ರಿಕ್ ತಂತ್ರಜ್ಞಾನ ಬಳಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಷಾ ತಿಳಿಸಿದ್ದಾರೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ದಳದ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಲ್ಲಾ ಅಪರಾಧಿಕ ಪ್ರಕರಣಗಳ ತನಿಖೆ ವಿಷಯದಲ್ಲಿ ತಂತ್ರಜ್ಞಾನ ಬಳಸಬೇಕು ಎಂದು ತಿಳಿಸಿದ್ದಾರೆ.

ಎಲ್ಲಾ ಪ್ರಕರಣಗಳ ತನಿಖಾ ಹಂತಗಳ ಕುರಿತು ಕಾಲಮಿತಿ ಹಾಗೂ ಸೂಚನೆ ನೀಡುವ ವ್ಯವಸ್ಥೆ ಅಳವಡಿಸಿಕೊಳ್ಳಬೇಕು. ದೂರುದಾರರು ಹಾಗೂ ಸಂತ್ರಸ್ತರ ನೆರವಿಗಾಗಿ ಪ್ರಕರಣಗಳ ಕುರಿತು ಮಾಹಿತಿ ನೀಡಬೇಕು ಎಂದು ಅಮಿತ್ ಷಾ ಹೇಳಿದ್ದಾರೆ.

# ಶಿವ ರಾಜ್‌ಕುಮಾರ್ ಶಸ್ತ್ರಚಿಕಿತ್ಸೆ ಯಶಸ್ವಿಗೆ ಪ್ರಾರ್ಥನೆ



ದಾವಣಗೆರೆ, ಡಿ. 25- ಶಸ್ತ್ರಚಿಕಿತ್ಸೆಗೊಳಗಾಗಿರುವ ಹಿರಿಯ ನಟ ಶಿವರಾಜ್ ಕುಮಾರ್ ಅವರು ಶೀಘ್ರ ಗುಣಮುಖರಾಗಲೆಂದು ಪ್ರಾರ್ಥಿಸಿ ಜಿಲ್ಲಾ ಆರ್ಯ ಈಡಿಗ ಸಂಘದ ವತಿಯಿಂದ ಇಂದು ವಿಶೇಷ ಪೂಜೆ ಸಲ್ಲಿಸಲಾಯಿತು. ಸಮಾಜದ ಜಿಲ್ಲಾಧ್ಯಕ್ಷ ಆರ್. ಶಂಕರ್, ಪ್ರಧಾನ ಕಾರ್ಯದರ್ಶಿ ಎ. ನಾಗರಾಜ್ ಸೇರಿದಂತೆ, ಸಂಘದ ಪದಾಧಿಕಾರಿಗಳು, ಈಡಿಗ ಸಮಾಜ ಬಾಂಧವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas